ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01,	Issue: 252	RNI Number : KNKAN/25/A2770	25-09-2026	Friday	Page 04,	Price 2/-	suddinimmuru@gmail.com	Mob:-8660146563
ಸಂಪುಟ :01	ಸಂಚಿಕೆ:252	ರಾಯಚೂರು	25-09-2026	ಶುಕ್ರವಾರ	ಪುಟ 04	ಬೆಲೆ ರೂ.2/-		ಮೊ:8660146563

ನಂದಿನಿ ಹಾಲಿನ ದರ ಪ್ರತಿ ಲೀಟರ್‌ಗೆ 2 ರೂ.ಏರಿಕೆ ಸಾಧ್ಯತೆ

ಬೆಂಗಳೂರು, ಸೆ.24-

ಕೆಎಂಎಫ್ ನಂದಿನಿ ಹಾಲು ಹಾಗೂ ಇತರ ಉತ್ಪನ್ನಗಳ ದರವನ್ನು ಸರಿಸುಮಾರು ₹2ರಷ್ಟು ಹೆಚ್ಚಿಸಲು ರಾಜ್ಯ ಸರ್ಕಾರ ಅನುಮತಿಸುವ ಸಾಧ್ಯತೆ ಇದೆ. ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಬರ ಪರಿಸ್ಥಿತಿ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಬಹುತೇಕ ಶಾಸಕರು ನಂದಿನಿ ಹಾಲಿನ ದರ ಹೆಚ್ಚಿಸಲು ಒತ್ತಡ ಹೇರಿದ್ದಾರೆ. ಆಡಳಿತ ಪಕ್ಷಗಳ ಸದಸ್ಯರಷ್ಟೇ ಅಲ್ಲದೆ, ವಿರೋಧ ಪಕ್ಷಗಳ ಸದಸ್ಯರಿಂದಲೂ ಇದೇ ಒತ್ತಾಯ ಕೇಳಿಬಂದಿದೆ.

ಹಾಲು ಮಹಾಮಂಡಳ ಹಾಗೂ ಅದರ ಒಕ್ಕೂಟಗಳು ಪ್ರತಿ ಲೀಟರ್‌ಗೆ ಸುಮಾರು ₹10 ದರ ಏರಿಕೆ ಮಾಡಬೇಕೆಂದು ಪಟ್ಟು ಹಿಡಿದಿವೆ. ನಾಳೆ ಕೆಎಂಎಫ್‌ನ ಆಡಳಿತ ಮಂಡಳಿ ಸಭೆ ನಡೆಯಲಿದ್ದು, ದರ ಏರಿಕೆಗೆ ಅನುಮತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ನಡೆಸಿವೆ. ಮುಂದಿನ ವಾರ ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್ ಅಧ್ಯಕ್ಷರಾಗುವ ಸಾಧ್ಯತೆ ಇದೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಪಶು ಮೇವು ಹಾಗೂ ಇತರ ಹೈನುಗಾರಿಕೆ ವೆಚ್ಚಗಳು ದುಬಾರಿಯಾಗಿದ್ದು, ಹಾಲು ಉತ್ಪಾದಕರು ನಷ್ಟ ಅನುಭವಿಸುತ್ತಿದ್ದಾರೆ ಎಂಬ ಚರ್ಚೆ ನಡೆಯುತ್ತಿದೆ. ಈ ನಷ್ಟವನ್ನು ಸರಿದೂಗಿಸಲು ಹಾಲಿನ ದರ ಏರಿಕೆಗೆ ಅನುಮತಿ ನೀಡಲೇಬೇಕು ಎಂಬ ಒತ್ತಡವಿದೆ. ಪಶು ಆಹಾರದ ಬೆಲೆ ಪ್ರತಿ ಚೀಲಕ್ಕೆ ₹720ರಿಂದ ₹1,250ರವರೆಗೆ ಏರಿಕೆಯಾಗಿದೆ.

ಹಾಲು ಒಕ್ಕೂಟಗಳೂ ನಷ್ಟದಲ್ಲಿದ್ದು, ಹಾಲಿನ ದರ ಏರಿಕೆಗೆ ಅನುಮತಿ ನೀಡದಿದ್ದರೆ ಸರ್ಕಾರವೇ ನಷ್ಟದ ಹಣವನ್ನು ಭರಿಸಿಕೊಡಬೇಕು ಎಂಬ ಬೇಡಿಕೆ ಕೇಳಿಬರುತ್ತಿದೆ. ರಾಜ್ಯ ಸರ್ಕಾರ ಆರ್ಥಿಕ ಸಂಕಷ್ಟದಲ್ಲಿದ್ದು, ಹಾಲಿನ ಪ್ರೋತ್ಸಾಹಧನ ಬಿಡುಗಡೆ ಮಾಡಲು ಪರದಾಡುತ್ತಿದೆ. ಹೀಗಿರುವಾಗ ನಷ್ಟದ ಮೊತ್ತವನ್ನು ಭರಿಸಿಕೊಡಬೇಕು ಎಂದು ಕೇಳಿದರೆ, ಸದ್ಯದ ಪರಿಸ್ಥಿತಿಯಲ್ಲಿ ಅದು ಅಸಾಧ್ಯದ ಮಾತು ಎಂದು ಹೇಳಲಾಗುತ್ತಿದೆ.

ಹಾಲು ಒಕ್ಕೂಟಗಳಿಗೆ ಪ್ರತಿದಿನ 1.11 ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಪ್ರಸ್ತುತ ಪ್ರತಿ ಲೀಟರ್ ಹಾಲನ್ನು ₹35 ದರದಲ್ಲಿ ಉತ್ಪಾದಕರಿಂದ ಖರೀದಿಸಲಾಗುತ್ತಿದೆ. ರಾಷ್ಟ್ರಮಟ್ಟದಲ್ಲಿ ಸರಾಸರಿ ಪ್ರತಿ ಲೀಟರ್ ಹಾಲನ್ನು ₹41ರ ದರದಲ್ಲಿ ಖರೀದಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ₹8ರಿಂದ ₹10ರಷ್ಟು ದರ ಏರಿಕೆ ಮಾಡಿದರೆ ರೈತರು ಹಾಗೂ ಹಾಲು ಉತ್ಪಾದಕರು ಅನುಭವಿಸುತ್ತಿರುವ ನಷ್ಟವನ್ನು ಸರಿಪಡಿಸಬಹುದು ಎಂಬ ಚರ್ಚೆಗಳು ನಡೆಯುತ್ತಿವೆ.

ಇದೇ ವೇಳೆ ಪ್ರತಿ ಲೀಟರ್ ಹಾಲಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನವನ್ನು ₹5ರಿಂದ ₹8ಕ್ಕೆ ಹೆಚ್ಚಿಸಬೇಕು ಎಂಬ ಒತ್ತಾಯವೂ ಇದೆ. ಹಾಲು ಒಕ್ಕೂಟಗಳ ಪ್ರಮುಖರು ಎರಡು ದಿನಗಳ ಹಿಂದೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಹಾಲಿನ ದರ ಹೆಚ್ಚಳಕ್ಕೆ ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ.

ಹಾಲಿನ ದರ ಹೆಚ್ಚಳದಿಂದ ರೈತರಿಗೆ ಅನುಕೂಲವಾಗಲಿದೆ. ಗ್ರಾಮೀಣ ಭಾಗದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇದು ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವಾಗಬಹುದು ಎಂಬ ಲೆಕ್ಕಾಚಾರವೂ ನಡೆದಿದೆ ಎನ್ನಲಾಗಿದೆ. ಆದರೆ ಹಾಲು ಖರೀದಿಸುವ ಗ್ರಾಹಕರಿಗೆ ಹೊರೆಯಾಗುವುದನ್ನು ಪರಿಗಣಿಸಿ ₹10ರ ಬದಲಿಗೆ ₹2ರಷ್ಟು ದರ ಹೆಚ್ಚಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.



ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿಯಿಂದ ಪ್ರತಿಭಟನೆ : ಶ್ವೇತಪತ್ರ ಬಿಡುಗಡೆಗೆ ಆಗ್ರಹ

ರಾಯಚೂರು: ರಾಜ್ಯದ ಆರ್ಥಿಕ ಸ್ಥಿತಿ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಒದಗಿಸುವ ವಿಚಾರವನ್ನು ಪ್ರಶ್ನಿಸಿ ರಾಯಚೂರು ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.



ಪ್ರತಿಭಟನೆಯಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದ್ದು, ರೈತರು, ಮಹಿಳೆಯರು, ಯುವಕರು, ವಿಕಲಚೇತನರು ಹಾಗೂ ಜನಸಾಮಾನ್ಯರು ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯ ಸರ್ಕಾರವು ಭಾರಿ ಪ್ರಮಾಣದಲ್ಲಿ ಸಾಲ ಮಾಡಿದ್ದು, ಹೊಸದಾಗಿ ನಾಲ್ಕು ಲಕ್ಷ ಕೋಟಿ ರೂಪಾಯಿಗೂ ಅಧಿಕ ಸಾಲ ಪಡೆದಿದೆ. ಒಟ್ಟಾರೆ ರಾಜ್ಯದ ಸಾಲದ ಮೊತ್ತ ಸುಮಾರು ಎಂಟು ಲಕ್ಷ ಕೋಟಿ ರೂಪಾಯಿಗೆ ತಲುಪಿದೆ ಎಂದು ಅವರು ಆರೋಪಿಸಿದರು. ಸಾಲದ ಪ್ರಮಾಣ ಹೆಚ್ಚಾಗುತ್ತಿದ್ದರೂ ಅದಕ್ಕೆ ತಕ್ಕಂತೆ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ದೂರಿದರು.

ರಾಜ್ಯದ ಆರ್ಥಿಕ ಪರಿಸ್ಥಿತಿ ಕುರಿತು ಹಣಕಾಸು ಇಲಾಖೆ ಮುಖ್ಯಮಂತ್ರಿಗಳಿಗೆ ಎಚ್ಚರಿಕೆ ನೀಡಿದೆ ಎನ್ನಲಾಗುತ್ತಿರುವ ಹಿನ್ನೆಲೆಯಲ್ಲಿ, ಕರಾವಳಿ ಸೇರಿದಂತೆ ವಿವಿಧ ಭಾಗಗಳಿಗೆ ಸಾವಿರಾರು ಕೋಟಿ ರೂಪಾಯಿಗಳ ಯೋಜನೆಗಳನ್ನು ಘೋಷಿಸಿರುವುದು ಅನುಷ್ಠಾನದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಹೇಳಿದರು.

ರಸ್ತೆ ಅಭಿವೃದ್ಧಿಗೆ 10 ಸಾವಿರ ಕೋಟಿ ರೂ. ಸೇರಿದಂತೆ ವಿವಿಧ ಯೋಜನೆಗಳಿಗೆ ಅನುದಾನ ಘೋಷಿಸಲಾಗಿದ್ದರೂ, ಸರ್ಕಾರದ ಬಳಿ ವಾಸ್ತವವಾಗಿ ಹಣದ ಲಭ್ಯತೆ ಎಷ್ಟಿದೆ ಎಂಬುದನ್ನು ಜನರಿಗೆ ಸ್ಪಷ್ಟಪಡಿಸಬೇಕು ಎಂದು ಅವರು ಆಗ್ರಹಿಸಿದರು.

ವಿಕಲಚೇತನರು, ವೃದ್ದರು ಹಾಗೂ ವಿಧವೆಯರಿಗೆ ಪಿಂಚಣಿ ಪಾವತಿಯಲ್ಲಿ ವಿಳಂಬವಾಗುತ್ತಿದೆ. ರೈತರಿಗೆ ಪರಿಹಾರ ನೀಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದ ಅವರು, ಶಿಕ್ಷಣ ಇಲಾಖೆಯಲ್ಲಿ ಶಾಲಾ ಮಕ್ಕಳಿಗೆ ವಿತರಿಸಿರುವ ಶೂ ಮತ್ತು

4ನೇ ಪುಟ.....



ದಲಿತರ ಸರಣಿ ಮೂರು ಕೊಲೆಗಳ ಸಿಐಡಿ ತನಿಖೆಗೆ ಆಗ್ರಹ: ಗೃಹ ಸಚಿವರಿಗೆ ಮನವಿ

ಜಿಲ್ಲೆಯಲ್ಲಿ ನಡೆದ ದಲಿತರ ಸರಣಿ ಮೂರು ಕೊಲೆ ಪ್ರಕರಣಗಳನ್ನು ಸಿಐಡಿ ತನಿಖೆಗೆ ವಹಿಸುವಂತೆ ಆಗ್ರಹಿಸಿ ಜಿಲ್ಲೆಯ ದಲಿತ ಮುಖಂಡರು ಬೆಂಗಳೂರಿನಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ ಮೂರು ಕೊಲೆ ಪ್ರಕರಣಗಳು ನಡೆದಿದ್ದರೂ ಗೃಹ ಸಚಿವರು ಜಿಲ್ಲೆಗೆ ಭೇಟಿ ನೀಡದಿರುವುದಕ್ಕೆ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಸಿಂಗ್ ಹಾಗೂ ಮಾಜಿ ಸಚಿವ ಎನ್.ಎಸ್. ಬೋಸರಾಜು ಅವರ ನೇತೃತ್ವದಲ್ಲಿ ಗೃಹ ಸಚಿವರನ್ನು ಭೇಟಿಯಾಗಲು ಅವಕಾಶ ಕಲ್ಪಿಸಲಾಯಿತು.

ನಿಯೋಗದ ಸದಸ್ಯರು ಭೂಮಾನಂದ ಕೊಲೆ ಪ್ರಕರಣ ಹಾಗೂ ಅಶ್ವಿನಿ ಛಲವಾದಿ ಮತ್ತು ರಾಣೆಮ್ಮ ಪ್ರಕರಣಗಳ ತನಿಖೆಯನ್ನು ಗಂಭೀರವಾಗಿ ಕೈಗೊಳ್ಳಬೇಕೆಂದು ಮನವಿ ಮಾಡಿದರು. ಪ್ರಕರಣಗಳ ತನಿಖೆಯಲ್ಲಿ ವಿಳಂಬವಾದರೆ ರಾಜ್ಯಾದ್ಯಂತ

4ನೇ ಪುಟ.....

ಎಸ್‌ಐಆರ್‌ನಲ್ಲಿ ಸಾಮಾನ್ಯ ಮತದಾರರ ಹಕ್ಕಿಗೆ ತಾರತಮ್ಯ : ಪ್ರಕಾಶ್ ರಾಜ್

ರಾಯಚೂರು,ಸೆ.24-

ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ () ಪ್ರಕ್ರಿಯೆಯಲ್ಲಿ ಗಣ್ಯರ ಹೆಸರುಗಳನ್ನು ಕೆಲವೇ ಗಂಟೆಗಳಲ್ಲಿ ಮರು ಸೇರ್ಪಡೆ ಮಾಡಲಾಗಿದ್ದು, ಸಾಮಾನ್ಯ ಮತದಾರರು ಮಾತ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಬಹುಭಾಷಾ ನಟ ಹಾಗೂ ಸಾಮಾಜಿಕ ಹೋರಾಟಗಾರ ಪ್ರಕಾಶ್ ರಾಜ್ ಆರೋಪಿಸಿದರು.



ನಗರದ ಕೊಠಾರಿ ಫಂಕ್ಷನ್ ಹಾಲ್‌ನಲ್ಲಿ ಬುಧವಾರ ನಡೆದ ಎಸ್‌ಐರ್ಆ ಪರಿಶೋಧನೆ ಮತ್ತು ಪ್ರತಿರೋಧ ಪ್ರವಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೆಹಲಿಯಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆಯಲ್ಲಿಮುಖ್ಯಮಂತ್ರಿ ರೇಖಾ ಗುಪ್ತ, ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಭಾರತದ ಮುಖ್ಯ ನ್ಯಾಯಮೂರ್ತಿಯ ಕುಟುಂಬ ಸದಸ್ಯರು ಹಾಗೂ ಚುನಾವಣಾ ಆಯೋಗದ ಒಬ್ಬ ಆಯುಕ್ತರ ಕುಟುಂಬ ಸದಸ್ಯರ ಹೆಸರುಗಳು ಮತದಾರರ ಪಟ್ಟಿಯಿಂದ ಕೈಬಿಟ್ಟಿದ್ದವು ಎಂಬ ವರದಿಗಳು ಬಂದಿವೆ. ಬಳಿಕ ಅವುಗಳನ್ನು ಮರು ಸೇರ್ಪಡೆ ಮಾಡಲಾಗಿದೆ ಎಂದು ಹೇಳಿದ ಅವರು, ಸಾಮಾನ್ಯ ಜನರು ಮಾತ್ರ ದಾಖಲೆಗಳು ಮತ್ತು ಇತರ ಪ್ರಕ್ರಿಯೆಗಳಿಗಾಗಿ ಅಲೆದಾಡುವ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂದು ಆರೋಪಿಸಿದರು.

ಮತದಾನದ ಸಮಾನ ಹಕ್ಕಿಗೆ ಧಕ್ಕೆ ಆಗಬಾರದು. ಮತದಾರರ ಪಟ್ಟಿಯಲ್ಲಿರುವ ದೋಷಗಳನ್ನು ಸರಿಪಡಿಸುವ ಹೆಸರಿನಲ್ಲಿ ಅರ್ಹ ಮತದಾರರ ಹೆಸರುಗಳನ್ನು ಕೈಬಿಡಬಾರದು ಎಂದು ಅವರು ಒತ್ತಾಯಿಸಿದರು.

ದೇಶದಲ್ಲಿ ಮಿಲಿಟರಿ ಆಡಳಿತ ಜಾರಿಗೆ ತರಲು ಸಾಧ್ಯವಾಗದಿರುವುದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನವೇ ಕಾರಣ. ಹೀಗಾಗಿ ಚುನಾವಣಾ ಆಯೋಗ, ಜಾರಿ ನಿರ್ದೇಶನಾಲಯ ಸೇರಿದಂತೆ ವಿವಿಧ ಸಂಸ್ಥೆಗಳನ್ನು ಬಳಸಿಕೊಂಡು ಮತದಾನದ ಹಕ್ಕನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ಪ್ರಕಾಶ್ ರಾಜ್ ಆರೋಪಿಸಿದರು.

ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಹಲವು ಪ್ರಶ್ನೆಗಳು ಎದ್ದಿವೆ. ಆಯೋಗದ ಅಧಿಕಾರಿಗಳ ಹೇಳಿಕೆಗಳಲ್ಲೇ ಕೆಲವು ಲೋಪಗಳು ಬಹಿರಂಗವಾಗಿವೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಯಾರ ಮಾತು ಕೇಳುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಮನೆ ಬದಲಾಯಿಸಿದವರು, ಮನೆ ಇಲ್ಲದವರು ಸೇರಿದಂತೆ ಹಲವು ಕಾರಣಗಳನ್ನು ಮುಂದಿಟ್ಟು ಮತದಾರರ ಪಟ್ಟಿಯಿಂದ ಹ'ಸ'ರ'ಂಗ'ಳ'ನ'್ನ ತೆಗೆದ'ುಹಾಕ'ಲಾಗ'ುತ್ತಿದೆ. ಮತದಾರರ ಪಟ್ಟಿಯಲ್ಲಿನ ದೋಷಗಳನ್ನು ಸರಿಪಡಿಸುವ ಹೆಸರಿನಲ್ಲಿ ಅರ್ಹ ಮತದಾರರ ಹಕ್ಕಿಗೆ ಧಕ್ಕೆ ಆಗಬಾರದು. ಅವಳಿ-ಜವಳಿ ಮಕ್ಕಳ ವಯಸ್ಸಿನ

4ನೇ ಪುಟ.....

ಓಂ ಗ್ರೂಪ್ ಅಸೋಸಿಯೇಷನ್ ಗ್ರೂಪ್‌ವತಿಯಿಂದ 11 ನೇ ವರ್ಷದ ಮಹಾ ಅನ್ನಸಂತರ್ಪಣೆ



ರಾಯಚೂರು:

ನಗರದ ಎಲ್‌ಬಿಎಸ್ ಬಡಾವಣೆಯ ಓಂ ಗ್ರೂಪ್ ಅಸೋಸಿಯೇಷನ್ ವತಿಯಿಂದ ಗಣೇಶೋತ್ಸವದ ಅಂಗವಾಗಿ 11ನೇ ವರ್ಷದ ಮಹಾ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಎಲ್‌ಬಿಎಸ್ ನಗರದ ಆಂಜನೇಯ ದೇವಸ್ಥಾನದ ಆವರಣದಲ್ಲಿ ಅದ್ದೂರಿಯಾಗಿ ಹಾಗೂ ಶಿಸ್ತುಬದ್ಧವಾಗಿ ಹಮ್ಮಿಕೊಳ್ಳಲಾಯಿತು.

ಗಣೇಶೋತ್ಸವದ 8ನೇ ದಿನದಂದು ಭಕ್ತರಿಗೆ ಮಹಾಪ್ರಸಾದ ವಿತರಿಸುವ ಮೂಲಕ ಓಂ ಗ್ರೂಪ್ ಅಸೋಸಿಯೇಷನ್ ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಉತ್ತಮ ಸಂದೇಶ ನೀಡಿದೆ. ಓಂಕಾರ್ ಯಾದವ್ ಅವರು ಜಾತಿ-ಧರ್ಮದ ಭೇದವಿಲ್ಲದೆ ಎಲ್ಲರನ್ನೂ ಪ್ರೀತಿ, ವಿಶ್ವಾಸ ಹಾಗೂ ಆತ್ಮೀಯತೆಯಿಂದ

4ನೇ ಪುಟ.....

ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಮಳೆ : ರೈತರಲ್ಲಿ ಸಂತಸ

ರಾಯಚೂರು:

ರಾಯಚೂರು ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಮಂಗಳವಾರ ಸಂಜೆ ಒಂದರಿಂದ ಎರಡು ಗಂಟೆಗಳ ಕಾಲ ನಿರಂತರ ಮಳೆ ಸುರಿದಿದೆ.

ಜಿಲ್ಲೆಯಲ್ಲಿ ಸಕಾಲಕ್ಕೆ ಮಳೆ ಬಾರದ ಕಾರಣ ಭೀಕರ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ಜನರು ಹಾಗೂ ಜಾನುವಾರುಗಳು ತೀವ್ರ ಸಂಕಷ್ಟ ಎದುರಿಸುತ್ತಿದ್ದರು. ಅನೇಕ ದಿನಗಳಿಂದ ಮಳೆಯಿಲ್ಲದೆ ಹತ್ತಿ, ಭತ್ತ, ತೊಗರಿ ಸೇರಿದಂತೆ ವಿವಿಧ ಬೆಳೆಗಳು ಒಣಗುವ ಸ್ಥಿತಿಗೆ ತಲುಪಿದ್ದವು.



ಮಳೆಯಾಗಲೆಂದು ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ಭಜನೆ ಹಾಗೂ ಪೂಜೆಗಳು ನಡೆದಿದ್ದರೆ, ರಾಯಚೂರು ನಗರ, ಸಿಂಧನೂರು, ಲಿಂಗಸುಗೂರು ಸೇರಿದಂತೆ ಹಲವು ಕಡೆ ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಗುತ್ತಿತ್ತು.

ಮಂಗಳವಾರ ಸುರಿದ ಮಳೆಯಿಂದ ರೈತರಲ್ಲಿ ಹೊಸ ಆಶಾಭಾವನೆ ಮೂಡಿದ್ದು, ಒಣಗುತ್ತಿದ್ದ ಬೆಳೆಗಳಿಗೆ ಜೀವಕಳೆ ಬಂದಂತಾಗಿದೆ. ಮಳೆಯಿಂದಾಗಿ ನಗರದ ರಸ್ತೆಗಳಲ್ಲಿ ನೀರು ಹರಿದರೂ, ಬಿಸಿಲಿನ ತಾಪದಿಂದ ಕಂಗೆಟ್ಟ ಜನರು ನಿರಾಳರಾಗಿದ್ದಾರೆ.

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿಮಹೋತ್ಸವ ಕ್ರೀಡಾಕೂಟಕ್ಕೆ ಚಾಲನೆ

ಪತ್ರಕರ್ತರ ಒತ್ತಡದ ಬದುಕಿನಲ್ಲಿ ಕ್ರೀಡೆ ಮುಖ್ಯ : ಡಾ.ಸುರೇಶ ಜಿ

ರಾಯಚೂರು,ಸೆ.24

ರಾಯಚೂರು ರಿಪೋರ್ಟರ್ಸ್ ಗಿಲ್ಡ್‌ನ ಬೆಳ್ಳಿ ಮಹೋತ್ಸವದ ಸಂಭ್ರಮದ ಅಂಗವಾಗಿ ಪತ್ರಕರ್ತರಿಗಾಗಿ ವಿವಿಧ ಕ್ರೀಡಾಕೂಟಗಳನ್ನು ಆಯೋಜಿಸಿರುವುದು ಅರ್ಥಪೂರ್ಣವಾಗಿದೆ. ಪತ್ರಕರ್ತರ ಒತ್ತಡದ ಬದುಕಿನಲ್ಲಿ ಕ್ರೀಡೆ ಅತ್ಯಂತ ಮುಖ್ಯವಾಗಿದ್ದು, ಪತ್ರಕರ್ತರು ಕ್ರೀಡೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಾ.ಸುರೇಶ ಜಿ ಹೇಳಿದರು.

ನಗರದ ಮಹಾತ್ಮ ಗಾಂಧಿ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಶಟಲ್ ಬ್ಯಾಡ್ಮಿಂಟನ್ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬೆಳ್ಳಿ ಮಹೋತ್ಸವದ ಅಂಗವಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ, ಭಾಷಣ ಸ್ಪರ್ಧೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಇದರ ಜೊತೆಗೆ ಪತ್ರಕರ್ತರಿಗಾಗಿ ಕ್ರೀಡಾಕೂಟ ಆಯೋಜಿಸಿರುವುದು ಸಂತಸದ ಸಂಗತಿ ಎಂದರು.



ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆಯ ಸಹಾಯಕ ನಿರ್ದೇಶಕ ಈರೇಶ ನಾಯಕ್ ಮಾತನಾಡಿ, ಕ್ರೀಡೆಯನ್ನು ಕೇವಲ ಒಂದು ದಿನ ಆಡುವುದಕ್ಕೆ ಸೀಮಿತಗೊಳಿಸದೆ ಪ್ರತಿದಿನ ಅಭ್ಯಾಸ ಮಾಡುವುದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಾಗಿರುತ್ತದೆ. ಒತ್ತಡದ ಜೀವನದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಸಹಕಾರಿಯಾಗಿದ್ದು, ವಿವಿಧ ಕ್ರೀಡೆಗಳನ್ನು ಆಯೋಜಿಸಿರುವ ರಿಪೋರ್ಟರ್ಸ್ ಗಿಲ್ಡ್‌ನ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸಿದರು.

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್ ಮಾತನಾಡಿ, ಗಿಲ್ಡ್ ಬೆಳ್ಳಿ ಮಹೋತ್ಸವದ ಅಂಗವಾಗಿ ಪತ್ರಕರ್ತರಿಗಾಗಿ ವಿವಿಧ ಚಟುವಟಿಕೆ , ಸ್ಪರ್ಧೆಗಳನ್ನ ಆಯೋಜಿಸಲಾಗಿದೆ. ಪತ್ರಕರ್ತರಿಗಾಗಿ ಆಯೋಜಿಸಿರುವ ಕ್ರೀಡಾಕೂಟಕ್ಕೆ ಇಂದು ಶಟಲ್ ಬ್ಯಾಡ್ಮಿಂಟನ್‌ನೊಂದಿಗೆ ಚಾಲನೆ ದೊರೆತಿದ್ದು, ಮುಂದಿನ ದಿನಗಳಲ್ಲಿ ಚೆಸ್, ಕೇರಂ,ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡೆಗಳು ನಡೆಯಲಿವೆ.

ಪತ್ರಕರ್ತರಿಗಾಗಿ ಈಗಾಗಲೇ ಕತೆ ಕವನ ಸ್ಪರ್ಧೆ ಏರ್ಪಡಿಸಲಾಗಿತ್ತು ಆಯ್ಕೆಯಾದ ಕತೆ ಕವನಗಳ ಸಂಕಲನವನ್ನ ಪುಸ್ತಕ ರೂಪದಲ್ಲಿ ಹೊರತರಲು ಸಿದ್ದತೆ ನಡೆದಿದೆ. ಛಾಯಾಚಿತ್ರ ಸ್ಪರ್ಧೆ, ವ್ಯಂಗ್ಯ ಚಿತ್ರ ಸ್ಪರ್ಧೆ ಗಳನ್ನ ಏರ್ಪಡಿಸಲಾಗಿದ್ದು ಎಲ್ಲರೂ ಭಾಗವಹಿಸಿ ಬೆಳ್ಳಿವಹೋತ್ಸವ ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಮಾಜಿ ಅಧ್ಯಕ್ಷ ಚನ್ನಬಸವಣ್ಣ, ಹಿರಿಯ ಪತ್ರಕರ್ತ ಶಿವಮೂರ್ತಿ ಹಿರೇಮಠ ಉಪಸ್ಥಿತರಿದ್ದರು. ಜಗನ್ನಾಥ ಪೂಜಾರಿ, ಮಂಜುನಾಥ ಸಾಲಿ, ಮಹಾನಂದ,

4ನೇ ಪುಟ.....

ಎಸ್‌ಐಆರ್ ಬಗ್ಗೆ ಮುಖ್ಯ ಚುನಾವಣಾ ಆಯುಕ್ತರ ಜೊತೆಗೆ ಮೋದಿ-ಶಾ ಕೂಡಾ ನಿರ್ಧಾರ ಮಾಡುತ್ತಿದ್ದಾರೆ: ಪ್ರಕಾಶ್ ರಾಜ್



ಕಲಬುರಗಿ,ಸೆ.23-

''ಕೇಂದ್ರ ಚುನಾವಣಾ ಆಯೋಗದಲ್ಲಿ ಮೂವರು ಪ್ರಮುಖರಿದ್ದಾರೆ. ಇಬ್ಬರು ಆಯುಕ್ತರು ಈಗಾಗಲೇ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿಲ್ಲ ಎಂದು ದೂರು ನೀಡಿದ್ದಾರೆ. ಈ ಪ್ರಕ್ರಿಯೆಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಒಬ್ಬರಾದರೆ, ಹಕ್ಕಬುಕ್ಕರಾದ ಮೋದಿಶಾ ಅವರೂ ಇದ್ದಾರೆ ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಆರೋಪಿಸಿದ್ದಾರೆ.

ನಗರದ ರಿಂಗ್ ರಸ್ತೆಯ ರಾಮನಗರ ಹಾಗೂ ಮಿಸ್ಬಾ ಕಾಲನಿಯಲ್ಲಿ ಎಸ್‌ಐಆರ್ ಪರಿಶೋಧನೆ ಹಾಗೂ ಪ್ರತಿರೋಧ ಪ್ರವಾಸ'ದ ಅಂಗವಾಗಿ ನಿವಾಸಿಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಅವರು ಮಾಧ್ಯಮಗಳೊಂದಿಗೆ ಮಾತನಾಡುತ್ತಿದ್ದರು.

ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರಕಾಶ್ ರಾಜ್, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಸಾಮಾನ್ಯ ಜನರು ಸಂಕಷ್ಟ ಎದುರಿಸುತ್ತಿದ್ದು, ಯಾವ ದಾಖಲೆಗಳನ್ನು ಸಲ್ಲಿಸಬೇಕು ಎಂಬುದರ ಕುರಿತು ಸ್ಪಷ್ಟತೆ ನೀಡದೆ ಜನರನ್ನು ಪರದಾಡಿಸಲಾಗುತ್ತಿದೆ ಎಂದು ಅವರು ಆರೋಪಿಸಿದರು.

''ಒಂದು ಕುಟುಂಬದಲ್ಲಿ ನಾಲ್ಕು ಜನರಿದ್ದರೆ, ಬಿಎಲ್‌ಓ ಬಂದು ಅರ್ಜಿ ಪಡೆದು ಅಪ್ಲೋಡ್ ಮಾಡುತ್ತಾರೆ. ಆದರೆ ಅದರಲ್ಲಿ ಒಬ್ಬರನ್ನು ಮೃತಪಟ್ಟವರು ಎಂದು, ಉಳಿದ ಮೂವರನ್ನು ಪರ್ಮನೆಂಟ್ ಶಿಫ್ಟೆಡ್‌ಎಂದು ನಮೂದಿಸುತ್ತಾರೆ. ಹೀಗಾದರೆ ಜನರು ಎಲ್ಲಿಗೆ ಹೋಗಬೇಕು?'' ಎಂದು ಪ್ರಕಾಶ್ ರಾಜ್ ಪ್ರಶ್ನಿಸಿದರು.

ಕಲಬುರಗಿಯಲ್ಲಿ ಎಎಸ್ಡಿಜಿ ಪಟ್ಟಿಯಲ್ಲಿ 5,21,957 ಜನರನ್ನು ಸೇರಿಸಲಾಗಿದೆ ಎಂದು ಹೇಳಲಾಗುತ್ತಿದೆ. ಅವರಿಗೆ ಸಮಯ ನೀಡಲಾಗುವುದು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ಹೇಳುತ್ತಿದ್ದಾರೆ. ಆದರೆ ಸ್ಪೆಲ್ಲಿಂಗ್ ತಪ್ಪುಗಳಿದ್ದರೆ ಅವುಗಳನ್ನು ಮತ್ತೊಮ್ಮೆ ಕ್ರಾಸ್ ಚೆಕ್ ಮಾಡಲು ಅವಕಾಶ ನೀಡಬೇಕಲ್ಲವೇ? ಅಧಿಕಾರಿಗಳು ಮನೆಗಳಿಗೆ ಬಂದು ಪರಿಶೀಲನೆ ನಡೆಸುತ್ತಿಲ್ಲ ಏಕೆ? ಎಂದು ಅವರು ಪ್ರಶ್ನಿಸಿದರು.

''ನೋಟಿಸ್ ನೀಡುತ್ತಿದ್ದಾರೆ. ಆದರೆ ಯಾವ ದಾಖಲೆ ತರಬೇಕು ಎಂಬುದನ್ನು ಹೇಳುತ್ತಿಲ್ಲ. ಸುಪ್ರೀಂ ಕೋರ್ಟ್ ಕೂಡ ಯಾವ ದಾಖಲೆ ನೀಡಬೇಕು ಎಂಬುದನ್ನು ಸ್ಪಷ್ಟಪಡಿಸುವಂತೆ ಹೇಳಿದೆ. ಮಿಷನ್ ಕೆಲಸ ಮಾಡುತ್ತಿದೆಯೋ, ಮನುಷ್ಯರು ಕೆಲಸ ಮಾಡುತ್ತಿದ್ದಾರೋ ಎಂಬ ಪ್ರಶ್ನೆಯನ್ನೂ ನ್ಯಾಯಾಲಯ ಕೇಳಿದೆ. ಜನರು ಯಾವ ದಾಖಲೆಗಳನ್ನು ನೀಡಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು'' ಎಂದು ಒತ್ತಾಯಿಸಿದರು.

ಕರ್ನಾಟಕದಲ್ಲಿ ಪಶ್ಚಿಮ ಬಂಗಾಳದ ಪರಿಸ್ಥಿತಿ ಬರಲು ಬಿಡುವುದಿಲ್ಲ:

ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದಂತೆ ಲಕ್ಷಾಂತರ ಪ್ರಕರಣಗಳು ಟ್ರಿಬ್ಯುನಲ್ಗೆ ಹೋಗಿವೆ ಎಂದು ಹೇಳಿದ ಪ್ರಕಾಶ್ ರಾಜ್, ಅಂತಹ ಪ್ರಕರಣಗಳ ವಿಚಾರಣೆ ಪೂರ್ಣಗೊಳ್ಳಲು 15 ವರ್ಷಗಳು ಬೇಕಾಗಬಹುದು. ಅಂತಹ ಪರಿಸ್ಥಿತಿ ಕರ್ನಾಟಕದಲ್ಲಿ ಆಗಲು ಬಿಡಬಾರದು. ರಾಜಕಾರಣಿಗಳು, ಶ್ರೀಮಂತರ ಮನೆಗಳಿಗೆ ಪರಿಶೀಲನೆ ಮಾಡುತ್ತಾರೆ. ಸಾಮಾನ್ಯ ಜನರ ಮನೆಗಳಿಗೆ ಯಾಕೆ ಹೋಗುತ್ತಿಲ್ಲ?'' ಎಂದು ಅವರು ಪ್ರಶ್ನಿಸಿದರು.

ಎಸ್‌ಐಆರ್‌ಗೆ ಸಂಬಂಧಿಸಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೆಪ್ಟಂಬರ್ 30ರೊಳಗೆ ದಾಖಲೆಗಳನ್ನು ಸಂಗ್ರಹಿಸಿ ರಾಜ್ಯ ಸರಕಾರದ ಮುಂದಿಡಲಾಗುವುದು ಎಂದು ಪ್ರಕಾಶ್ ರಾಜ್ ತಿಳಿಸಿದರು.

''ಅಕ್ಟೋಬರ್ 1ರಂದು ದಿಲ್ಲಿಯಲ್ಲಿ ಸುದ್ದಿಗೋಷ್ಠಿ ನಡೆಸುತ್ತೇವೆ. ಅಕ್ಟೋಬರ್ 15ರಂದು ದಿಲ್ಲಿಯ ಜಂತರ್ ಮಂತರ್ ನಲ್ಲಿ ಕರ್ನಾಟಕ ಮಾತ್ರವಲ್ಲದೆ ಬೇರೆ ರಾಜ್ಯಗಳ ಸಂತ್ರಸ್ತ ಜನರೂ ಸೇರಲಿದ್ದಾರೆ. ಕರ್ನಾಟಕದ ನಾಗರಿಕ ಸಮಾಜ ಆರು ತಿಂಗಳಿನಿಂದ ಎಸ್‌ಐಆರ್ ಪ್ರಕ್ರಿಯೆ ತಪ್ಪು ಎಂದು ಹೇಳುತ್ತಿದ್ದರೂ ಪ್ರಕ್ರಿಯೆ ಮುಂದುವರಿದಿದೆ'' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

''ಐದು ಕೋಟಿ ಮತದಾರರನ್ನು ವಾಪಸ್ ತರಲು ಕ್ಲಾರಿಟಿ ಮಾಡಲಿ. ಮತದಾರರ ಸಂಖ್ಯೆ ಐದು ಕೋಟಿ ಹೆಚ್ಚಾಗಬೇಕಾದರೆ, ದೇಶದಲ್ಲಿ ಈಗ ಮತದಾರರ ಸಂಖ್ಯೆ ಕಡಿಮೆಯಾಗುತ್ತಿರುವುದು ಯಾಕೆ? ಪಶ್ಚಿಮ ಬಂಗಾಳದಂತೆ ಕರ್ನಾಟಕ ಆಗಲು ನಾವು ಬಿಡುವುದಿಲ್ಲ. ದಾಖಲೆಗಳ ಸಮೇತ ಮಾಧ್ಯಮಗಳ ಮುಂದೆ ಬರಲಿದ್ದೇವೆ'' ಎಂದು ಪ್ರಕಾಶ್ ರಾಜ್ ಹೇಳಿದರು.

ಜೋಕುಮಾರ ಸ್ವಾಮಿ ಉತ್ಸವಕ್ಕೆ ಗೌರವಧನ ನೀಡಲು ಆಗ್ರಹಿಸಿ ಪ್ರತಿಭಟನೆ



ಕಲಬುರಗಿ,ಸೆ.23-

ಕೋಲಿ, ಕಬ್ಬಲಿಗ, ಬೆಸ್ತ, ಟೋಕರಿಕೋಲಿ, ವಾಲಿಕಾರ, ತಳವಾರ, ಜಮಾದಾರ, ನಾಯಿಕೋಡಿ, ನಾಟಿಕಾರ ಸೇರಿದಂತೆ ವಿವಿಧ ಬುಡಕಟ್ಟು ಸಮುದಾಯಗಳು

ಆಚರಿಸುವ ಜೋಕುಮಾರ ಸ್ವಾಮಿ ಉತ್ಸವಕ್ಕೆ ಸರ್ಕಾರದಿಂದ ಪ್ರೋತ್ಸಾಹ ನೀಡಬೇಕು ಎಂದು ಆಗ್ರಹಿಸಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಾಹಿತ್ಯ ಪರಿಷತ್ ವತಿಯಿಂದ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾಕಾರರು ಮಾತನಾಡಿ, ಗಣೇಶೋತ್ಸವದ ಬಳಿಕ ಸಾಂಪ್ರದಾಯಿಕವಾಗಿ ಆಚರಿಸಲಾಗುವ ಜೋಕುಮಾರ ಸ್ವಾಮಿ ಉತ್ಸವವು ಬುಡಕಟ್ಟು ಸಮುದಾಯಗಳ ಪ್ರಮುಖ ಸಾಂಸ್ಕೃತಿಕ ಆಚರಣೆಯಾಗಿದೆ. ಮಣ್ಣಿನಿಂದ ತಯಾರಿಸಿದ ಜೋಕುಮಾರ ಸ್ವಾಮಿಯ ಮೂರ್ತಿಯನ್ನು ಮರದ ಬುಟ್ಟಿಯಲ್ಲಿ ಪ್ರತಿಷ್ಠಾಪಿಸಿ, ಸಮುದಾಯದ ಹೆಣ್ಣುಮಕ್ಕಳು ಮನೆ ಮನೆಗೆ ತೆರಳಿ ಜೋಕುಮಾರ ಸ್ವಾಮಿಯ ಹಾಡುಗಳನ್ನು ಹಾಡುವ ಹಾಗೂ ಪ್ರತಿಯಾಗಿ ದವಸ-ಧಾನ್ಯಗಳನ್ನು ಸ್ವೀಕರಿಸುವ ಸಂಪ್ರದಾಯವನ್ನು ತಲೆತಲಾಂತರಗಳಿಂದ ಉಳಿಸಿಕೊಂಡು ಬಂದಿದ್ದಾರೆ ಎಂದು ತಿಳಿಸಿದರು.

ಈ ವಿಶಿಷ್ಟ ಜನಪದ ಸಂಪ್ರದಾಯವನ್ನು ಸಂರಕ್ಷಿಸುವ ಉದ್ದೇಶದಿಂದ ಜೋಕುಮಾರ ಸ್ವಾಮಿ ಉತ್ಸವಕ್ಕೆ ಸರ್ಕಾರದಿಂದ ಕನಿಷ್ಠ ₹51 ಸಾವಿರ ಗೌರವಧನ ನೀಡಬೇಕು ಎಂದು ಮನವಿಯಲ್ಲಿ ಆಗ್ರಹಿಸಿದರು.

ಬುಡಕಟ್ಟು ಸಮುದಾಯಗಳ ಅನೇಕ ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿದ್ದು, ಶಿಕ್ಷಣ, ಉದ್ಯೋಗ, ಆರೋಗ್ಯ ಸೇರಿದಂತೆ ವಿವಿಧ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿವೆ.

ಆದ್ದರಿಂದ ಅರ್ಹ ಫಲಾನುಭವಿಗಳಿಗೆ ಜಾತಿ ಮತ್ತು ಸಿಂಧುತ್ವ ಪ್ರಮಾಣಪತ್ರಗಳನ್ನು ಯಾವುದೇ ಅಡೆತಡೆಯಿಲ್ಲದೆ ನೀಡುವುದರೊಂದಿಗೆ ಸರ್ಕಾರದ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಡಾ. ಟಿ.ಡಿ. ರಾಜ್, ಪ್ರೊ. ಎಲ್.ಬಿ. ಹಿಟ್ಟನ್, ಶ್ರೀದೊಡ್ಡ ಪಂಡರಿ, ವಕೀಲ ಮಲ್ಲಿಕಾರ್ಜುನ ಕಲಬೇನ್ನೂರ, ಬಾಬುರಾವ ಜಮಾದಾರ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ತಡಕಲ್ ಗ್ರಾಮದಲ್ಲಿ ಅಂಬಾಭವಾನಿ ಮಂದಿರ ಉದ್ಘಾಟನೆ



ಆಳಂದ,ಸೆ.23-

ತಾಲೂಕಿನ ತಡಕಲ್ ಗ್ರಾಮದಲ್ಲಿ ಮಾಜಿ ಶಾಸಕ ಸುಭಾಷ ಆರ್. ಗುತ್ತೇದಾರ ಅವರು ತಮ್ಮ ತಾಯಿಯ ಸ್ಮರಣಾರ್ಥ ನೂತನವಾಗಿ ನಿರ್ಮಿಸಿರುವ ಅಂಬಾಭವಾನಿ ಮಂದಿರದ ಉದ್ಘಾಟನಾ ಮಹೋತ್ಸವ ಹಾಗೂ ಪಂಚಪೀಠಾಧೀಶ್ವರ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಬುಧವಾರ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅತ್ಯಂತ ವೈಭವದಿಂದ ಜರುಗಿತು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಮಾಜಿ ಶಾಸಕ ಸುಭಾಷ ಆರ್.ಗುತ್ತೇದಾರ ಅವರು, ನಾನು ನನ್ನ ಮಾತೆಯ ನೆನಪಿನಲ್ಲಿ ತುಳಜಾಪೂರದ ಅಂಬಾಭವಾನಿಯಲ್ಲಿ ನನ್ನ ಮಾತೆ ಅಂಬವ್ವ ರುಕ್ಮಯ್ಯ ಗುತ್ತೇದಾರ ಅವರನ್ನು ಕಾಣುತ್ತೇನೆ. ಈ ಮಂದಿರ ನಿರ್ಮಿಸಿ, ಪಂಚಪೀಠ ಜಗದ್ಗುರುಗಳ ಆಶೀರ್ವಾದದೊಂದಿಗೆ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು ನನಗೆ ಅತ್ಯಂತ ಸಂತಸ ತಂದಿದೆ ಎಂದು ಹೇಳಿದರು.

ಬೆಳಿಗ್ಗೆ 10 ಗಂಟೆಗೆ ಅಂಬಾಭವಾನಿ ಮೂರ್ತಿಯ ಪ್ರಾಣಪ್ರತಿಷ್ಠಾಪನಾ ಮಹೋತ್ಸವ ಶ್ರದ್ಧಾಭಕ್ತಿಯಿಂದ ನೆರವೇರಿತು. ಬಳಿಕ ಬೆಳಿಗ್ಗೆ 11 ಗಂಟೆಗೆ ಭವ್ಯ ಧರ್ಮಸಭೆ ನಡೆಯಿತು. ಪಂಚಪೀಠ ಜಗದ್ಗುರುಗಳ ಸಮ್ಮುಖದಲ್ಲಿ 1008 ಮುತ್ತೈದೆಯರಿಗೆ ಸಾಂಪ್ರದಾಯಿಕವಾಗಿ ಉಡಿ ತುಂಬುವ ಕಾರ್ಯಕ್ರಮ ಅತ್ಯಂತ ಭಕ್ತಿಭಾವದಿಂದ ನಡೆಯಿತು.

ನಂತರ ದೇವಿ ಮಂದಿರದಿಂದ ಆರಂಭವಾದ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮೆರವಣಿಗೆ ಕುಂಭ ಹೊತ್ತ ನೂರಾರು ಮಹಿಳೆಯರು, ಶೃಂಗರಿಸಿದ ಎತ್ತುಗಳ ಮೆರವಣಿಗೆ, ಪುರವಂತರ ಕುಣಿತ, ಡೊಳ್ಳು ಹಾಗೂ ವಿವಿಧ ವಾದ್ಯಮೇಳಗಳೊಂದಿಗೆ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ವೈಭವದಿಂದ ಸಾಗಿತು. ಮೆರವಣಿಗೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು. ಕಾರ್ಯಕ್ರಮದ ಅಂಗವಾಗಿ ಭಕ್ತಾದಿಗಳಿಗೆ ಮಹಾಪ್ರಸಾದ ವಿತರಣೆ ಮಾಡಲಾಯಿತು.

ಧರ್ಮಸಭೆಯಲ್ಲಿ ರಂಭಾಪುರಿ, ಉಜ್ಜಯಿನಿ ಹಾಗೂ ಕಾಶಿ ಪೀಠದ ಉಭಯ ಪೂಜ್ಯರು ಆಶೀರ್ವಚನ ನೀಡಿದರು. ಕಡಗಂಚಿಯ ವೀರಭದ್ರ ಶಿವಾಚಾರ್ಯರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ವೇದಿಕೆಯಲ್ಲಿ ನಂದಗಾಂವದ ರಾಜಶೇಖರ ಮಹಾಸ್ವಾಮಿಗಳು, ಹಾರಕೂಡದ ಡಾ.ಚನ್ನವೀರ ಶಿವಾಚಾರ್ಯರು, ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯರು, ನಿಂಬಾಳದ ಜಡೇಶಾಂತಲಿಂಗ ಮಹಾಸ್ವಾಮಿಗಳು, ಚಿಂಚನಸೂರದ ಸಿದ್ಧಮಲ್ಲ ಶಿವಾಚಾರ್ಯರು, ಮಾಡಿಯಾಳದ ಮರಳಸಿದ್ಧ ಮಹಾಸ್ವಾಮಿಗಳು, ಚಿನ್ಮಗಿರಿಯ ವೀರ ಮಹಾಂತ ಶಿವಾಚಾರ್ಯರು, ಮಾದನ ಹಿಪ್ಪರಗಾದ ಶಾಂತವೀರ ಶಿವಾಚಾರ್ಯರು, ಚಿಂಚನಸೂರದ ಗಂಗಾಧರ ಶಿವಾಚಾರ್ಯರು, ನಿಂಬರ್ಗಾದ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಬಂಗರಗಾದ ಶಿವಾನಂದ ಶಿವಾಚಾರ್ಯರು, ಪಡಸಾವಳಿಯ ಶಂಭುಲಿಂಗ ಶಿವಾಚಾರ್ಯರು, ತಡಕಲ್‌ನ ಸಿದ್ಧಮಲ್ಲ ಶಿವಾಚಾರ್ಯರು, ಭೂಸನೂರ ಶಂಭುಸೋಮನಾಥ ಶಿವಾಚಾರ್ಯರು, ಕಿಣ್ಣಿಸುಲ್ತಾನ ಶಾಂತಶಿವಲಿಂಗ ಶಿವಾಚಾರ್ಯರು, ಯಳಸಂಗಿಯ ಪರಮಾನಂದ ಮಹಾಸ್ವಾಮಿಗಳು, ನಿರಗುಡಿಯ ಹವಾ ಮಲ್ಲಿನಾಥ ಮಹಾರಾಜರು, ನರೋಣಾದ ಗುರುಮಹಾಂತ ಮಹಾಸ್ವಾಮಿಗಳು, ಕೇಸರ ಜವಳಗಾದ ವೀರಂತೇಶ್ವರ ಮಹಾಸ್ವಾಮಿಗಳು ಹಾಗೂ ಅಕ್ಕಲಕೋಟದ ಶ್ರೀ ಬಸವಲಿಂಗ ಮಹಾಸ್ವಾಮಿಗಳು ಸೇರಿದಂತೆ ಅನೇಕ ಮಠಾಧೀಶರು ಸಾನ್ನಿಧ್ಯ ವಹಿಸಿದ್ದರು. ಜಡಗಾದ ಮುರುಗರಾಜೇಂದ್ರ ಸ್ವಾಮೀಜಿ, ಬಬಲಾದದ ಗುರುಪಾದಲಿಂಗ ಸ್ವಾಮಿ ಹಾಗೂ ಶರಣಬಸವೇಶ್ವರ ಸಂಸ್ಥಾನದ ಚಿರಂಜೀವಿ ದೊಡ್ಡಪ್ಪ ಅಪ್ಪ ಕೂಡ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮಾಜಿ ಸಂಸದ ಉಮೇಶ ಜಾಧವ, ರವೀಂದ್ರ ಗಾಯಕವಾಡ, ಮಾಜಿ ಸಚಿವರಾದ ಮಾಲಿಕಯ್ಯ ಗುತ್ತೇದಾರ, ರೇವುನಾಯಕ ಬೆಳಮಗಿ, ಸುನೀಲ ವಲ್ಯಾಪುರೆ, ರಾಜುಗೌಡ, ಬಾಬುರಾವ ಚವ್ಹಾಣ, ಬಸವರಾಜ ಪಾಟೀಲ ಮುರುಂ, ಅಂಬಾರಾಯ ಅಷ್ಟಗಿ, ಅಮರನಾಥ ಪಾಟೀಲ್, ಹಣಮಂತ ಶೇರಿ ಸೇರಿದಂತೆ ಹಲವು ರಾಜಕೀಯ ಮುಖಂಡರು ಭಾಗವಹಿಸಿದ್ದರು.

ಜಿ.ಪಂ. ಮಾಜಿ ಉಪಾಧ್ಯಕ್ಷ ಹರ್ಷಾ ಗುತ್ತೇದಾರ, ಉದ್ಯಮಿ ಸಂತೋಷ ಗುತ್ತೇದಾರ, ಕುಪೇಂದ್ರ ಗುತ್ತೇದಾರ, ಅಶೋಕ ಗುತ್ತೇದಾರ ಸೇರಿದಂತೆ ಸಮಗ್ರ ಗುತ್ತೇದಾರ ಕುಟುಂಬದವರು, ತಡಕಲ್ ಗ್ರಾಮಸ್ಥರು ಹಾಗೂ ಸಾವಿರಾರು ಭಕ್ತಾದಿಗಳು ಪಾಲ್ಗೊಂಡು ಮಹೋತ್ಸವವನ್ನು ಯಶಸ್ವಿಗೊಳಿಸಿದರು.

ಜಲವರ್ಣ ಚಿತ್ರಕಲೆ ಭಾವನೆಗಳ ಅಭಿವ್ಯಕ್ತಿಗೆ ಪರಿಣಾಮಕಾರಿ ಮಾಧ್ಯಮ: ನಾಗಣ್ಣ ಪರಿಟ್



ಬೀದರ್,ಸೆ.23-

ಕಲೆಯ ಮೂಲಕ ಬದುಕಿನ ಅನುಭವಗಳನ್ನು ದಾಖಲಿಸುವ ಶಕ್ತಿ ಕಲಾವಿದರಿಗಿದ್ದು, ಜಲವರ್ಣ ಚಿತ್ರಕಲೆಯು ಪ್ರಕೃತಿ, ಜನಜೀವನ ಹಾಗೂ ಭಾವನೆಗಳನ್ನು ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಮಾಧ್ಯಮವಾಗಿದೆ ಎಂದು ಮಹಾನಗರ ಪಾಲಿಕೆ ವಲಯ ಆಯುಕ್ತ ನಾಗಣ್ಣ ಪರಿಟ್ ಹೇಳಿದರು.

ನಗರದ ಡಾ. ಎಸ್.ಎಂ. ಪಂಡಿತ್ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಗಿರಿಜನ ಉಪಯೋಜನೆಯಡಿ ಆಯೋಜಿಸಿದ್ದ ಜಲವರ್ಣ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚಿತ್ರಕಲೆ ಕೇವಲ ಬಣ್ಣಗಳನ್ನು ಕಾಗದದ ಮೇಲೆ ಮೂಡಿಸುವ ಕಲೆಯಲ್ಲ. ಅದು ಕಲಾವಿದನ ಕಲ್ಪನೆ, ಭಾವನೆ ಮತ್ತು ಸಮಾಜವನ್ನು ನೋಡುವ ದೃಷ್ಟಿಕೋನದ ಪ್ರತಿಬಿಂಬವಾಗಿದೆ. ಜಲವರ್ಣದಂತಹ ಸೂಕ್ಷ್ಮ ಕಲಾ ಪ್ರಕಾರದಲ್ಲಿ ಉತ್ತಮ ತರಬೇತಿ ಪಡೆದರೆ ಕಲಾವಿದರು ತಮ್ಮದೇ ಆದ ವಿಶಿಷ್ಟ ಕಲಾ ಶೈಲಿಯನ್ನು ರೂಪಿಸಿಕೊಳ್ಳಬಹುದು ಎಂದು ಅವರು ತಿಳಿಸಿದರು.

ಕರ್ನಾಟಕ ಲಲಿತ ಕಲಾ ಅಕಾಡೆಮಿ ಸದಸ್ಯ ಸಂಚಾಲಕ ಬಸವರಾಜ್ ಜಾನೆ ಮಾತನಾಡಿ, ರಾಜ್ಯದ ವಿವಿಧ ಭಾಗಗಳ ಪ್ರತಿಭಾವಂತ ಕಲಾವಿದರನ್ನು ಒಂದೆಡೆ ಸೇರಿಸಿ ಅವರ ಕಲಾ ಕೌಶಲವನ್ನು ವೃದ್ಧಿಸುವುದು ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿದೆ ಎಂದರು.

ಗಿರಿಜನ ಉಪಯೋಜನೆಯಡಿ ಕಲಾವಿದರಿಗೆ ತರಬೇತಿ ನೀಡುವ ಮೂಲಕ ಅವರಲ್ಲಿರುವ ಸೃಜನಶೀಲ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು.

ಹಾವೇರಿ, ಗದಗ, ಬೀದರ್ ಮೈಸೂರು, ಪಾವಗಡ, ಗುಳೇದಗುಡ್ಡ, ಇಳಕಲ್, ಧಾರವಾಡ, ದೊಡ್ಡಮಾಲೂರು, ಯಾದಗಿರಿ ಹಾಗೂ ಕೊಪ್ಪಳ ಸೇರಿದಂತೆ ವಿವಿಧ ಜಿಲ್ಲೆಗಳ ಕಲಾವಿದರು ಶಿಬಿರದಲ್ಲಿ ಭಾಗವಹಿಸಿದ್ದಾರೆ.

ಸೆಪ್ಟೆಂಬರ್ 21ರಿಂದ 24ರವರೆಗೆ ನಡೆಯಲಿರುವ ಈ ಕಾರ್ಯಾಗಾರದಲ್ಲಿ ಜಲವರ್ಣ ಕಲೆಯ ಸೂಕ್ಷ್ಮತೆ, ಬಣ್ಣಗಳ ಸಂಯೋಜನೆ ಹಾಗೂ ಚಿತ್ರರಚನೆಯ ತಂತ್ರಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಗುತ್ತಿದೆ.

ಹಿರಿಯ ಕಲಾವಿದ ಬಿ.ಕೆ. ಬಡಿಗೇರ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಜಲವರ್ಣ ಚಿತ್ರಕಲೆಯ ವಿವಿಧ ತಂತ್ರಗಳನ್ನು ಕಲಾವಿದರಿಗೆ ಪ್ರಾಯೋಗಿಕವಾಗಿ ಬೋಧಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಡಾ. ಎಸ್.ಎಂ. ಪಂಡಿತ್ ಚಿತ್ರಕಲಾ ಮಹಾವಿದ್ಯಾಲಯದ ಅಧ್ಯಕ್ಷೆ ಕವಿತಾ, ಹಿರಿಯ ಕಲಾವಿದರಾದ ಪ್ರಭಾಕರ್ ಅಶೋಕ್ ಹಿರೇಮಠ್, ಸೋಮಶೆಟ್ಟಿ, ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ವಿಷ್ಣುಕಾಂತ್ ಠಾಕೂರ್ ಡಾ. ಎಸ್.ಎಂ. ಪಂಡಿತ್ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಸುರೇಖಾ ವಾಲ್ದೊಡ್ಡೆ, ಮಂಜುಳಾ ಜಾನೆ, ಬಿ.ಕೆ ಬಡಿಗೇರ್ ಯೋಗೇಶ್ ಮಠದ್, ನಾಗರಾಜ್ ಜೋಗಿ ಹಾಗೂ ಸಂತೋಷ್ ಹೊನ್ನಿಕೇರಿ ಸೇರಿದಂತೆ ಶಿಬಿರಾರ್ಥಿಗಳು, ಉಪನ್ಯಾಸಕರು ಭಾಗವಹಿಸಿದ್ದರು. ವಿಜಯಶ್ರೀ ಸ್ವಾಗತಿಸಿದರು, ಪೀಟರ್ ನಿರೂಪಿಸಿದರು. ಸುಧಾರಾಣಿ ವಂದಿಸಿದರು.

ಕೆಬಿಎನ್ ವಿವಿಯಲ್ಲಿ ಫೋಲ್ಡ್‌ಸ್ಕೋಪ್ ತಂತ್ರಜ್ಞಾನ ಕಾರ್ಯಾಗಾರ



ಕಲಬುರಗಿ,ಸೆ.23-

ಖ್ವಾಜಾ ಬಂದೇ ನವಾಝ್ (ಕೆಬಿಎನ್) ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಪ್ರಾಣಿಶಾಸ್ತ್ರ ಹಾಗೂ ಸಸ್ಯಶಾಸ್ತ್ರ ವಿಭಾಗಗಳ ಜಂಟಿ ಆಶ್ರಯದಲ್ಲಿ ''ಫೋಲ್ಡ್‌ಸ್ಕೋಪ್: ಸೂಕ್ಷ್ಮ ಜಗತ್ತಿನ ಅನ್ವೇಷಣೆಗೆ ಕೈಗೆಟುಕುವ ಸಾಧನ'' ಕುರಿತು ಬುಧವಾರ ವಿಶೇಷ ಕಾರ್ಯಾಗಾರ ನಡೆಯಿತು.

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಕುತೂಹಲ ಬೆಳೆಸುವುದು ಹಾಗೂ ಕಡಿಮೆ ವೆಚ್ಚದ ಸೂಕ್ಷ್ಮದರ್ಶಕ ತಂತ್ರಜ್ಞಾನದ ಪ್ರಾಯೋಗಿಕ ಬಳಕೆಯ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ವಿಶ್ವವಿದ್ಯಾಲಯದ ಗೌರವಾನ್ವಿತ ಉಪಕುಲಪತಿ ಪ್ರೊ. ಸೈಯದ್ ಅಶ್ಫಾಕ್ ಅಹ್ಮದ್, ಪ್ರಾಯೋಗಿಕ ಕಲಿಕೆ ಮತ್ತು ಸೂಕ್ಷ್ಮ ಜಗತ್ತಿನ ಅನ್ವೇಷಣೆ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸಲು ಪೂರಕವಾಗಿದ್ದು, ಇಂತಹ ಕೈಗೆಟುಕುವ ತಂತ್ರಜ್ಞಾನವನ್ನು ಪರಿಚಯಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿದ್ದ ಡಾ. ಸುದರ್ಶನ್ ಅವರು ಫೋಲ್ಡ್‌ಸ್ಕೋಪ್‌ನ ತತ್ವ, ಕಾರ್ಯನಿರ್ವಹಣೆ ಹಾಗೂ ಅದರ ಮಹತ್ವದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಸಸ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸೈಯದ್ ಅಬ್ರಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಉಪನ್ಯಾಸದ ಬಳಿಕ ನಡೆದ ಪ್ರಾಯೋಗಿಕ ತರಬೇತಿಯಲ್ಲಿ ಫೋಲ್ಡ್‌ಸ್ಕೋಪ್ ಜೋಡಣೆ, ನಿರ್ವಹಣೆ ಮತ್ತು ಸೂಕ್ಷ್ಮ ವೀಕ್ಷಣೆಯ ವಿಧಾನಗಳನ್ನು ಡಾ. ಸುದರ್ಶನ್ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ವಿದ್ಯಾರ್ಥಿಗಳು ಸ್ವತಃ ಸಾಧನ ಜೋಡಿಸಿ ಸೂಕ್ಷ್ಮ ವೀಕ್ಷಣೆ ನಡೆಸುವ ಮೂಲಕ ನೇರ ಅನುಭವ ಪಡೆದರು. ಕಾರ್ಯಾಗಾರದಲ್ಲಿ ವಿಜ್ಞಾನ ವಿಭಾಗದ ಬೋಧಕರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 105 ಮಂದಿ ಭಾಗವಹಿಸಿದ್ದರು.

ಖಿರಾಅತ್‌ನೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ರೊಮಾನಾ ಮಿರ್ಜೆ ಸ್ವಾಗತಿಸಿದರು. ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಹೀನಾ ಮುಬೀನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಮೀನಾ ಮೆಹ್ರೀನ್ ಮತ್ತು ಜೈನಬ್ ಫಾತಿಮಾ ಕಾರ್ಯಕ್ರಮ ನಿರೂಪಿಸಿದರೆ, ಡಾ. ಸಾದಾತ್ ಅಲಿ ವಂದಿಸಿದರು.

ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣವೆಂಬುದು ತಪಸ್ಸು



ಕಲಬುರಗಿ,ಸೆ.23-

ಶಿಕ್ಷಣವೆಂಬುದು ಒಂದು ತಪಸ್ಸು . ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣ ಪಡೆಯುವುದು ವ್ಯಕ್ತಿತ್ವ ವಿಕಸನ ಮತ್ತು ಗುರಿ ಸಾಧನೆಯ ಮಹತ್ವದ ಘಟ್ಟವಾಗಿದ್ದು, ಗುರುವಿನ ಮಾರ್ಗದರ್ಶನದೊಂದಿಗೆ ಸ್ಪರ್ಧಾತ್ಮಕ ಮನೋಭಾವ, ಸ್ವಸಾಮರ್ಥ್ಯ ಮತ್ತು ಬದ್ಧತೆಯನ್ನು ಮೈಗೂಡಿಸಿಕೊಂಡರೆ ಉತ್ತಮ ಸಾಧನೆ ಸಾಧ್ಯ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಹಾಗೂ ಹೋರಾಟಗಾರ ಡಿ.ಜಿ.ಸಾಗರ್ ಹೇಳಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹರಿಹರ ಸಭಾಂಗಣದಲ್ಲಿ ಆಯೋಜಿಸಿದ್ದ ಸಾಹಿತ್ಯ ಚಟುವಟಿಕೆಗಳ ಸಮಾರೋಪ ಹಾಗೂ ಹಿರಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಪಡೆಯುವುದು ಎಂದರೆ ಕೇವಲ ಅಂಕ ಗಳಿಸುವುದಲ್ಲ; ಜವಾಬ್ದಾರಿಯನ್ನು ಕಲಿಯುವುದೂ ಆಗಿದೆ. ವಿದ್ಯಾರ್ಥಿಗಳು ರಾಷ್ಟ್ರ ನಿರ್ಮಾಣ, ಸಮಾಜ ಸುಧಾರಣೆ ಮತ್ತು ಶೋಷಣೆ ನಿವಾರಣೆಯಂತಹ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಸಮಾಜದಲ್ಲಿ ಎದುರಾಗುವ ಸವಾಲುಗಳಿಗೆ ಆತ್ಮವಿಶ್ವಾಸದಿಂದ ಎದುರಿಸಿ, ಅಸಾಧ್ಯ ಎಂಬ ಮನೋಭಾವವನ್ನು ತೊರೆದು ಹೊಸ ಸಾಧನೆಗಳ ಮೂಲಕ ಕಲ್ಯಾಣ ಕರ್ನಾಟಕ ಭಾಗದ ಕೀರ್ತಿಯನ್ನು ಹೆಚ್ಚಿಸಬೇಕು. ಕಲಿಸಿದ ಗುರುಗಳನ್ನು ಮತ್ತು ಶಿಕ್ಷಣ ನೀಡಿದ ಸಂಸ್ಥೆಯನ್ನು ಸದಾ ಸ್ಮರಿಸಿ ಆದರ್ಶ ವ್ಯಕ್ತಿಗಳಾಗಬೇಕು ಎಂದು ಸಲಹೆ ನೀಡಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಪ್ರೊ. ರಮೇಶ್ ರಾಥೋಡ್ ಮಾತನಾಡಿ, ಕನ್ನಡ ಹೃದಯದ ಭಾಷೆಯಾಗಿದ್ದು, ಐಕ್ಯತೆ ಮತ್ತು ಸದ್ಭಾವನೆಯನ್ನು ಬೆಳೆಸುವ ಶಕ್ತಿಯನ್ನು ಹೊಂದಿದೆ. ಜಾತಿ-ಮತ, ಮೇಲು-ಕೀಳು ಭೇದಗಳನ್ನು ಮರೆತು ಸಮಾನತೆಯ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಾನಿಕಾಯದ ಡೀನ್ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್.ಟಿ. ಪೋತೆ ಮಾತನಾಡಿ, ಕನ್ನಡ ವಿದ್ಯಾರ್ಥಿಗಳು ಸಂಸ್ಕೃತಿ ಮತ್ತು ಸಂಸ್ಕಾರವನ್ನು ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿ ಜೀವನದಲ್ಲಿ ಗಳಿಸಿದ ಜ್ಞಾನವು ಬದುಕಿನ ಸವಾಲುಗಳನ್ನು ಎದುರಿಸಲು ಪ್ರೇರಣೆಯಾಗಬೇಕು. ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಹಾಗೂ ಚಂದ್ರಶೇಖರ ಕಂಬಾರ ಅವರ ಕೃತಿಗಳನ್ನು ಓದುವ ಮೂಲಕ ಕನ್ನಡ ಸಾಹಿತ್ಯದ ಆಳವನ್ನು ಅರಿಯಬೇಕು ಎಂದು ಸಲಹೆ ನೀಡಿದರು.

ಸಂದರ್ಶಕ ಪ್ರಾಧ್ಯಾಪಕ ಡಾ. ಸೂರ್ಯಕಾಂತ ಎಸ್.ಸುಜ್ಯಾತ್ ಮಾತನಾಡಿದರು. ವಿದ್ಯಾರ್ಥಿ ಪ್ರತಿನಿಧಿಗಳಾದ ರಾಹುಲ್, ಐಶ್ವರ್ಯ ಮತ್ತು ಆಶಿಪ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಜಯಭೀಮ್ ರಾವುರ್ ಮತ್ತು ರಾಜು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಕನ್ನಡ ಸಂಶೋಧನಾ ಸಂಘ ಮತ್ತು ಕನ್ನಡ ಸಾಹಿತ್ಯ ಸಂಘದ ಪದಾಧಿಕಾರಿಗಳು, ಅತಿಥಿ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಶ್ವಿನಿ ಬಟಾವಲ್ ಪ್ರಾರ್ಥಿಸಿದರು. ರೇಷ್ಮಾ ಸ್ವಾಗತಿಸಿದರು. ಸಚಿನ್ ಮತ್ತು ಲಕ್ಷ್ಮೀ ಚೌಡಾಪುರ ಕಾರ್ಯಕ್ರಮ ನಿರ್ವಹಿಸಿದರು. ಶಿವರಾಜ್ ವಂದಿಸಿದರು.

ಒಂದನೇಯ ಪುಟದಿಂದ

ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿಯಿಂದ ಪ್ರತಿಭಟನೆ : ಶ್ವೇತಪತ್ರ ಬಿಡುಗಡೆಗೆ ಆಗ್ರಹ

ಸಾಕ್ಸ್ ಗಳ ಗುಣಮಟ್ಟದ ಬಗ್ಗೆಯೂ ಪ್ರಶ್ನೆಗಳು ಕೇಳಿಬಂದಿದ್ದು, ಈ ಕುರಿತು ಸೂಕ್ತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಶಿಕ್ಷಕರ ನೇಮಕಾತಿ ಹಾಗೂ ವೇತನ ಪಾವತಿ ಸೇರಿದಂತೆ ಶಿಕ್ಷಣ ಕ್ಷೇತ್ರದ ಹಲವು ಸಮಸ್ಯೆಗಳಿಗೆ ಸರ್ಕಾರ ತ್ವರಿತವಾಗಿ ಪರಿಹಾರ ಕಲ್ಪಿಸಬೇಕು. ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ರಾಜ್ಯದ ನೈಜ ಆರ್ಥಿಕ ಪರಿಸ್ಥಿತಿ, ಸಾಲದ ಪ್ರಮಾಣ, ಆದಾಯ-ವೆಚ್ಚ ಹಾಗೂ ವಿವಿಧ ಯೋಜನೆಗಳಿಗೆ ಮೀಸಲಾದ ಅನುದಾನದ ಕುರಿತು ಮುಖ್ಯಮಂತ್ರಿ ಶ್ವೇತಪತ್ರ ಬಿಡುಗಡೆ ಮಾಡಬೇಕು ಎಂದು ರಾಯಚೂರು ಜಿಲ್ಲಾ ಬಿಜೆಪಿ ಘಟಕ ಮನವಿ ಮಾಡಿತು.

ಪ್ರತಿಭಟನೆಯಲ್ಲಿ ರಾಜ್ ಕುಮಾರ್, ಬಂಡೇಶ್ ವಲಕ್ಕಂದಿನ್ನಿ, ಡಾ. ನಾಗರಾಜ್ ಬಾಲ್ಕಿ,ಪಿ. ಯಲ್ಲಪ್ಪ, ಕಡಗೋಳ್, ಆಂಜಿನೇಯ್ಯ, ಲಕ್ಷ್ಮಣ್, ಮುಕ್ತಿಯಾರ್,ರಾಮನಂದ್ ಯಾದವ್, ರವೀಂದ್ರ ಜಲ್ದಾರ್, ಶರಣಬಸವ ಜೋಳದಡಿಗಿ, ಶರಣಮ್ಮ ಕಾಮರೆಡ್ಡಿ, ವಿಜಯಲಕ್ಷ್ಮಿ, ಅಶ್ವಿನಿ ಸೇರಿದಂತೆ ಇತರರು ಇದ್ದರು.

ದಲಿತರ ಸರಣಿ ಮೂರು ಕೊಲೆಗಳ ಸಿಐಡಿ ತನಿಖೆಗೆ ಆಗ್ರಹ: ಗೃಹ ಸಚಿವರಿಗೆ ಮನವಿ

ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ನಿಯೋಗದ ಸದಸ್ಯರು ತಿಳಿಸಿದರು.

ಭೇಟಿ ವೇಳೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಾತನಾಡಿ, ಪ್ರಕರಣಗಳ ಗಂಭೀರತೆ ತಮ್ಮ ಗಮನದಲ್ಲಿದ್ದು ತನಿಖೆಯಲ್ಲಿ ನಿರ್ಲಕ್ಷ್ಯ ವಹಿಸುವ ಪ್ರಶ್ನೆಯೇ ಇಲ್ಲ ಎಂದು ನಿಯೋಗಕ್ಕೆ ತಿಳಿಸಿರುವುದಾಗಿ ಮುಖಂಡರು ಹೇಳಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿರುವುದಾಗಿಯೂ ಅವರು ತಿಳಿಸಿದ್ದಾರೆ ಎಂದು ನಿಯೋಗ ತಿಳಿಸಿದರು.

ನಿಯೋಗದಲ್ಲಿ ಎಸ್. ಮಾರೆಪ್ಪ (ವಕೀಲ), ರವೀಂದ್ರನಾಥ್ ಪಟ್ಟಿ, ಅಂಬಣ್ಣ ಅರೋಲಿಕರ್, ಶಿವರಾಯ ಅಕ್ಕರಕಿ, ಹೇಮರಾಜ್ ಅಸ್ಕಿಹಾಳ್, ಶರಣಪ್ಪ ದಿನ್ನಿ, ಬೂದೆಪ್ಪ ಕ್ಯಾದಿಗಿ, ಬಸವರಾಜ್ ಮಿಯಾಪುರ, ಬಸವರಾಜ್ ಹದ್ದಿನಾಳ್, ಅರ್ಜುನ್ ಜಗಲಿ, ನರಸಿಂಹಲು ನೆಲಹಾಳ್, ನರಸಿಂಹಲು ಮರ್ಚಟಾಳ್, ಬಸವರಾಜ್ ಭಂಡಾರಿ, ವಸಂತ್ ಅಸ್ಕಿಹಾಳ್ ಹಾಗೂ ತಾಯಪ್ಪ ಗದಾರ್ ಉಪಸ್ಥಿತರಿದ್ದರು.

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿಮಹೋತ್ಸವ ಕ್ರೀಡಾಕೂಟಕ್ಕೆ ಚಾಲನೆ ಪತ್ರಕರ್ತರ ಒತ್ತಡದ ಬದುಕಿನಲ್ಲಿ ಕ್ರೀಡೆ ಮುಖ್ಯ : ಡಾ.ಸುರೇಶ ಜಿ

ನೀಲಕಂಠಸ್ವಾಮಿ, ಅಣ್ಣಪ್ಪ ಮೇಟಿಗೌಡ, ಗುರುರಾಜ ಕೆ, ಸುರೇಶ್ ಗೌಡ, ಅಮರೇಶ್ ಸಜ್ಜನ, ಖಾಜಾ ಹುಸೇನ್, ದುರ್ಗೇಶ್, ವಾಸು , ಜಯಕುಮಾರ ದೇಸಾಯಿ, ರಾಚಯ್ಯ ಸ್ವಾಮಿ, ಅರುಣ್ ಸೇರಿದಂತೆ ಅನೇಕ ಪತ್ರಕರ್ತರು ಉಪಸ್ಥಿತರಿದ್ದರು. ಪಂದ್ಯಗಳ ನಿರ್ಣಾಯಕರಾದ ನಿವೃತ್ತ ಶಿಕ್ಷಕ ಮಲ್ಲಪ್ಪ ಹಾಗೂ ಶಿಕ್ಷಕ ಮಹಮ್ಮದ್ ಖಾಲಿದ್ ಉಪಸ್ಥಿತರಿದ್ದರು. ಗಿಲ್ಡ್ ಜಂಟಿ ಕಾರ್ಯದರ್ಶಿ ಶ್ರೀಕಾಂತ್ ಸಾವೂರ್ ಕಾರ್ಯಕ್ರಮ ಸಂಯೋಜಿಸಿ ನಿರೂಪಿಸಿದರು.

ಎಸ್ಐಆರ್‌ನಲ್ಲಿ ಸಾಮಾನ್ಯ ಮತದಾರರ ಹಕ್ಕಿಗೆ ತಾರತಮ್ಯ : ಪ್ರಕಾಶ್ ರಾಜ್

ಅಂತರ ಸೇರಿದಂತೆ ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಹೆಸರುಗಳನ್ನು ಕೈಬಿಡುವುದು ಸರಿಯಲ್ಲ ಎಂದು ಹೇಳಿದರು.

ತೃತೀಯ ಲಿಂಗಿಗಳು, ವಲಸೆ ಕಾರ್ಮಿಕರು ಸೇರಿದಂತೆ ವಿವಿಧ ಸಮುದಾಯದ ಜನರಿಂದ ದಾಖಲೆಗಳನ್ನು ಕೇಳಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಾಮಾನ್ಯ ಮತದಾರರ ಸ್ಥಿತಿ ಏನು ಎಂಬುದನ್ನು ಪರಿಗಣಿಸಬೇಕು. ಎಲ್ಲರಿಗೂ ಸಮಾನ ಮತದಾನದ ಹಕ್ಕು ದೊರೆಯಬೇಕು ಎಂದು ಒತ್ತಾಯಿಸಿದರು.

ಎಸ್ಐಆರ್ ದೊಡ್ಡ ಅನಾಹುತಕ್ಕೆ ಕಾರಣವಾಗಬಹುದು. ಒಂದು ತಿಂಗಳ ಅವಧಿಯಲ್ಲಿ ಕೋಟ್ಯಂತರ ಜನರ ಮತದಾರರ ಪಟ್ಟಿಯನ್ನು ಪರಿಶೀಲಿಸುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಅವರು, ಕರ್ನಾಟಕದ 100 ಮತಗಟ್ಟೆಗಳಿಗೆ ಭೇಟಿ ನೀಡಿ ಎಲ್ಲಿ ಯಾವ ರೀತಿಯ ಲೋಪಗಳಾಗಿವೆ ಎಂಬುದನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಸಂತ್ರಸ್ತ ಮತದಾರರಿಂದ ದಾಖಲೆಗಳು ಹಾಗೂ ಮಾಹಿತಿ ಸಂಗ್ರಹಿಸಿ ಸೆಪ್ಟೆಂಬರ್ 30ರಂದು ಮುಖ್ಯಮಂತ್ರಿ ಹಾಗೂ ಸಚಿವರನ್ನು ಭೇಟಿ ಮಾಡಿ ಮನವರಿಕೆ ಮಾಡಲಾಗುವುದು. ಅಕ್ಟೋಬರ್ 1ರಂದು ದೆಹಲಿಯಲ್ಲಿ ಸಭೆ ನಡೆಸಿ ಈ ವಿಷಯವನ್ನು ರಾಷ್ಟ್ರಮಟ್ಟದಲ್ಲಿ ಗಮನಕ್ಕೆ ತರಲಾಗುವುದು ಎಂದು ಪ್ರಕಾಶ್ ರಾಜ್ ಹೇಳಿದರು.

ಕಾರ್ಯಕ್ರಮದಲ್ಲಿ ಎಸ್ಐಆರ್ ವಿರೋಧಿ ಸಮಿತಿಯ ವೀರಸಂಗಯ್ಯ, ಕೆ.ಎಲ್ ಅಶೋಕ, ಎಂ.ಆರ್.ಬೇರಿ, ಮಾರೆಪ್ಪ ಹರವಿ, ಅಸಿಮುದ್ದೀನ್ ಅಖ್ತರ್, ಮತದಾರರ ಹಕ್ಕು ಕಳೆದುಕೊಂಡಿರುವ ಜಾನ್ ವೆಸ್ಲಿ, ಮಾರೆಮ್ಮ, ಹೋರಾಟಗಾರ ಬಸವರಾಜ ಕಳಸ, ಮತೀನ್ ಅನ್ಸಾರಿ ಉಪಸ್ಥಿತರಿದ್ದರು.

ಓಂ ಗ್ರೂಪ್ ಅಸೋಸಿಯೇಷನ್ ಗ್ರೂಪ್‌ವತಿಯಿಂದ 11 ನೇ ವರ್ಷದ ಮಹಾ ಅನ್ನಸಂತರ್ಪಣೆ

ಕಾಣುತ್ತಿರುವುದು ಶ್ಲಾಘನೀಯ ಎಂದು ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ರವಿ ಬೋಸ್ ರಾಜ್, ಮಹಮ್ಮದ್ ಸಲಾಂ, ಗೋಡ್ಸೆ ತಿಮ್ಮಾರೆಡ್ಡಿ, ನೂರು ಮೊಹಮ್ಮದ್, ಕೈಸರ್, ಹುಸೇನ್, ಓಂಕಾರ್ ವಕೀಲರು, ಜಂಬಣ್ಣ, ರಾಜು, ಸಿದ್ದು, ವೆಂಕಟೇಶ್, ಸೀನು ಮಾರಪ್ಪ, ಸೋಡಾ ಸಂತು, ವೀರೇಶ್ ಗೋಬಿ, ಡ್ಯಾನ್ಸ್ ರಾಜು , ಹೋಟೆಲ್ ವೀರೇಶ್

ಕಿಚ್ಚ ಮಲ್ಲಿಕಾರ್ಜುನ, ನರ ಸಿಂಹ, ಶರಣ ,ಸೇರಿದಂತೆ ಅನೇಕ ಯುವ ಮುಖಂಡರು ಹಾಗೂ ಓಂ ಗ್ರೂಪ್ ಅಸೋಸಿಯೇಷನ್ ಪದಾ ಧಿಕಾರಿಗಳು ಭಾಗವಹಿಸಿದ್ದರು.

ಮಾದರಿಯ ಮತದಾರ ಪಟ್ಟಿಯ ತಯಾರಿಕೆ ಎಸ್ಐಆರ್ ಕಾರ್ಯಕ್ರಮದ ಉದ್ದೇಶ ಡಾ. ಬಿರಾದಾರ್



ಪ್ರಜಾಪ್ರಭುತ್ವ ಆಡಳಿತವು ಬಲಗೊಳ್ಳಬೇಕಾದರೆ. ಪ್ರತಿಯೊಬ್ಬ ಹದಿನೆಂಟು ವರ್ಷ ಪೂರ್ಣಗೊಂಡವರು ಮತದಾರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಬೇಕು.ವಿಶೇಷವಾಗಿ ಪ್ರಸ್ತುತ ರಾಯಚೂರು ಜಿಲ್ಲೆಯಲ್ಲಿ ಎಸ್ಐಆರ್ ಕಾರ್ಯಕ್ರಮ ಅಡಿಯಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರನ್ನ ಸೇರ್ಪಡೆ ಮಾಡುವಂತಹ ಪ್ರಕ್ರಿಯೆ ನಡೆದಿದ್ದು ಈಗಾಗಲೇ ಜಿಲ್ಲಾಡಳಿತ.ಜಿಲ್ಲಾ ಪಂಚಾಯತ್.ತಾಲೂಕ್ ಆಡಳಿತ ತಾಲೂಕ ಪಂಚಾಯತ್ ಸ್ವೀಪ ಸಮಿತಿ ವಿವಿಧ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದರ ಮೂಲಕ ಜಾಗೃತಿ ಮೂಡಿಸುವಂತ ಕಾರ್ಯವನ್ನು ಮಾಡುತ್ತಿದ್ದು ಈಗಾಗಲೇ ಮೊದಲನೇ ಭಾಗದಲ್ಲಿ ಮತದಾರರ ಪಟ್ಟಿಯ ಹೆಸರನ್ನ ಪ್ರಕಟಣೆಗೊಂಡಿದೆ.

ಯಾರಾದರೂ ಒಂದು ವೇಳೆ ಅಹ ಮತದಾರರು ಮತದಾರ ಪಟ್ಟಿಯಿಂದ ಹೆಸರನ್ನು ಸೇರ್ಪಡೆ ಆಗದೆ ಇದ್ದಂತ ಸಂದರ್ಭದಲ್ಲಿ ಮತ್ತೆ ಅವಕಾಶವನ್ನ ಕಲ್ಪಿಸಿಕೊಡಲಾಗಿದೆ ಅಕ್ಟೋಬರ್ ಒಂದು 2026ಕ್ಕೆ 18 ವರ್ಷ ಪೂರ್ಣಗೊಳ್ಳುವ ಯುವಕ ಯುವತಿಯರು ತಮ್ಮ ಹೆಸರನ್ನು ಕಡ್ಡಾಯವಾಗಿ ಮತದಾರ ಪಟ್ಟಿಯಲ್ಲಿ ಸೇರಿಸಬೇಕೆಂದು ರಾಯಚೂರು ನಗರದ ಪೂರ್ಣಿಮಾ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ನಡೆದ ಎಸ್ಐಆರ್ ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮದ ನೂಡಲ್ ಅಧಿಕಾರಿ ಡಾ. ದಂಡಪ್ಪಬಿರಾದಾರ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಆದ ಡಾಕ. ಚಂದ್ರಶೇಖರ್ ರಡ್ಡಿ ಕರಮುಡಿಯವರು ಮಾತನಾಡುತ್ತಾ.ಇದೊಂದು ಯುವಕರಿಗೆ ಒಳ್ಳೆಯ ಅವಕಾಶ ಜೊತೆಗೆ ಮತದಾನದ ಹಕ್ಕನ್ನು ನಾವು ಪಡೆದುಕೊಳ್ಳಬೇಕಾದರೆ ನಾವು ನಮ್ಮ ಹೆಸರನ್ನು ಕಡ್ಡಾಯವಾಗಿ ಮತದಾರ ಪಟ್ಟಿಯಲ್ಲಿ ಹೆಸರುಸೇರ್ಪಡೆ ಆಗಬೇಕು. ಪ್ರಜಾಪ್ರಭುತ್ವ ಆಡಳಿತದಲ್ಲಿ ಮತದಾನಕ್ಕೆ ಬಹಳ ಮಹತ್ವವಿದೆ ಎಂದು ಹೇಳಿದರು. ಕಾರ್ಯಕ್ರಮದ ವೇದಿಕೆ ಮೇಲೆ ಡಾ. ನಂದ. ಡಾ. ಶ್ರಿ ತಿಕಾ ಡಾಕ. ಸೌಮ್ಯ ಡಾ. ಗೀತಾ ಯಾಳಗಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು

ಹಿಂದೂ ಸಮಾವೇಶದಲ್ಲಿ ಬಸವಾದಿ ಶರಣರ ಹೆಸರಿನ ಬಳಕೆ ವಿರೋಧಿಸಿ ಸೆ.25ರಂದು ಕಲಬುರಗಿಯಲ್ಲಿ ಪ್ರತಿಭಟನೆ: ಯೋಗೇಶ್ ಸಿರಿಗೆರೆ



ಬೀದರ್,ಸೆ.23-

ಕಾಡಸಿದ್ದೇಶ್ವರ (ಕನೇರಿ) ಸ್ವಾಮೀಜಿ ನೇತೃತ್ವದಲ್ಲಿ ಕಲಬುರಗಿಯಲ್ಲಿ ನಡೆಯಲಿರುವ ಬಸವಾದಿ ಶರಣರ ಹಿಂದೂ ಸಮಾವೇಶದಲ್ಲಿ ಬಸವಾದಿ ಶರಣರ ಹೆಸರು ಹಾಗೂ ವಚನ ಸಾಹಿತ್ಯವನ್ನು ಬಳಸುತ್ತಿರುವುದನ್ನು ವಿರೋಧಿಸಿ ಸೆಪ್ಟೆಂಬರ್ 25ರಂದು ಕಲಬುರಗಿಯಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ವಚನ ಸಂರಕ್ಷಣಾ ಹೋರಾಟ ಸಮಿತಿಯ ಅಧ್ಯಕ್ಷ ಯೋಗೇಶ್ ಸಿರಿಗೆರೆ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವಣ್ಣನವರ ಕಾಯಕ, ದಾಸೋಹ, ಸಮಾನತೆ ಹಾಗೂ ಜಾತಿ ಮತ್ತು ಲಿಂಗ ತಾರತಮ್ಯ ವಿರೋಧಿ ವಿಚಾರಗಳನ್ನು ಬೇರೊಂದು ಧಾರ್ಮಿಕ ಚೌಕಟ್ಟನಲ್ಲಿ ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ಸಂಘಟನೆಯ ಪ್ರಮುಖ ಸಿದ್ರಾಮ್ ಶಟಕಾರ್ ಮಾತನಾಡಿ, ಬಸವ ತತ್ವವು 12ನೇ ಶತಮಾನದಲ್ಲಿ ಶರಣರ ವಚನಗಳ ಮೂಲಕ ರೂಪುಗೊಂಡ ವೈಚಾರಿಕ ಪರಂಪರೆಯಾಗಿದ್ದು, ಅದನ್ನು ಯಾವುದೇ ಒಂದು ಧರ್ಮ ಅಥವಾ ಜಾತಿಗೆ ಸೀಮಿತಗೊಳಿಸಬಾರದು ಎಂದು ಅಭಿಪ್ರಾಯಪಟ್ಟರು. ವಚನಗಳನ್ನು ಸಂದರ್ಭದಿಂದ ಬೇರ್ಪಡಿಸಿ ಅಥವಾ ತಿರುಚಿ ಬಳಸಿದರೆ ಸಮಾಜಕ್ಕೆ ತಪ್ಪು ಸಂದೇಶ ಹೋಗುವ ಸಾಧ್ಯತೆ ಇದೆ ಎಂದು ಹೇಳಿದರು.

ಮಹೇಶ್ ಗೋರನಾಳಕರ್ ಮಾತನಾಡಿ, ಬುದ್ಧ, ಬಸವಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳು ಸಮಾನತೆ, ಮಾನವ ಘನತೆ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುತ್ತವೆ. ಸಂವಿಧಾನವು ಪ್ರತಿಯೊಬ್ಬರಿಗೂ ಧಾರ್ಮಿಕ ನಂಬಿಕೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿರುವುದರಿಂದ ಪರಸ್ಪರ ಸಾಂಸ್ಕೃತಿಕ ಮತ್ತು ಧಾರ್ಮಿಕ ಅಸ್ಮಿತೆಯನ್ನು ಗೌರವಿಸಬೇಕು ಎಂದು ತಿಳಿಸಿದರು.

ರವಿ ಪಾಪಡೆ ಮಾತನಾಡಿ, ಬೀದರ್ ಸೇರಿದಂತೆ ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಬಸವಪರ, ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ. ಕಲಬುರಗಿಯ ಕನ್ನಡ ಭವನದಿಂದ ಜಗತ್ ವೃತ್ತದವರೆಗೆ ಮೆರವಣಿಗೆ ನಡೆಸಲು ಉದ್ದೇಶಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಗದೀಶ್ವರ್ ಬಿರಾದಾರ್ ಮಾತನಾಡಿ, ವಚನ ಸಾಹಿತ್ಯ ಮತ್ತು ಸಂವಿಧಾನದ ಆಶಯಗಳ ಸಂರಕ್ಷಣೆ ಹಾಗೂ ಲಿಂಗಾಯತ ಧಾರ್ಮಿಕ ಅಸ್ಮಿತೆಯ ಕುರಿತು ಜನಜಾಗೃತಿ ಮೂಡಿಸುವುದು ಪ್ರತಿಭಟನೆಯ ಉದ್ದೇಶವಾಗಿದೆ. ಬಸವ ತತ್ವದ ಕುರಿತು ನಡೆಯುತ್ತಿರುವ ಚರ್ಚೆಯನ್ನು ಶಾಂತಿಯುತ ಹಾಗೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಮುಂದುವರಿಸ ಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಸವರಾಜ್ ಬುಳ್ಳಾ, ಬಸವಕುಮಾರ್ ಪಾಟೀಲ್, ಗಣೇಶ್ ಬಿರಾದಾರ್ ಪ್ರವೀಣ್ ಎಕಲಾರೆ ಹಾಗೂ ಗುರುನಾಥ್ ಬಿರಾದಾರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಬಸವಾದಿ ಶರಣರ ಹಿಂದೂ ಸಮಾವೇಶಕ್ಕೆ ಕಾಯಕ ಶರಣರ ಸಮಾಜಗಳ ಒಕ್ಕೂಟ ವಿರೋಧ



ಕಲಬುರಗಿ,ಸೆ.23-

ನಗರದ ಎನ್.ವಿ. ಮೈದಾನದಲ್ಲಿ ಸೆಪ್ಟೆಂಬರ್ 27ರಂದು ನಡೆಸಲು ಉದ್ದೇಶಿಸಿರುವ ಬಸವಾದಿ ಶರಣರ ಹಿಂದೂ ಸಮಾವೇಶಕ್ಕೆ ಕರ್ನಾಟಕ ರಾಜ್ಯ ಕಾಯಕ ಶರಣರ ಸಮಾಜಗಳ ಒಕ್ಕೂಟ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಈ ಕುರಿತು ನಗರದ ಜಗತ್ ಬಡಾವಣೆಯಲ್ಲಿರುವ ಶರಣ ಢೋಹರ ಕಕ್ಕಯ್ಯ ದೇವಸ್ಥಾನದಲ್ಲಿ ಬುಧವಾರ ಸಭೆ ನಡೆಸಿದ ಒಕ್ಕೂಟದ ಪ್ರಮುಖರು, ಬಸವತತ್ವ ಮತ್ತು ಶರಣರ ಪರಂಪರೆಯ ಹೆಸರಿನಲ್ಲಿ ಹಿಂದೂ ಸಮಾವೇಶ ನಡೆಸುವುದು ಸರಿಯಲ್ಲ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾತನಾಡಿದ ಮುಖಂಡರು, ಕನ್ನೇರಿ ಮಠದ ಕಾಡಸಿದ್ದೇಶ್ವರರ ಶರಣ ಪರಂಪರೆಯ ಹಿನ್ನೆಲೆಯನ್ನು ಉಲ್ಲೇಖಿಸಿ, ಬಸವತತ್ವದ ವಿಚಾರಧಾರೆಯನ್ನು ವೈದಿಕ ಆಚರಣೆಗಳೊಂದಿಗೆ ಸಂಯೋಜಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ಈ ರೀತಿಯ ನಡೆ ಸಮಾಜದಲ್ಲಿ ಗೊಂದಲ ಮತ್ತು ಅಶಾಂತಿಗೆ ಕಾರಣವಾಗಬಹುದು ಎಂದು ಅವರು ಹೇಳಿದರು. ಬಸವತತ್ವ ಹಾಗೂ ಶರಣರ ಪರಂಪರೆಯ ಆಶಯಗಳನ್ನು ಕಾಪಾಡುವ ಉದ್ದೇಶದಿಂದ ಸೆಪ್ಟೆಂಬರ್ 25ರಂದು ಬಸವತತ್ವ ಹಾಗೂ ಸಂವಿಧಾನ ರಕ್ಷಣಾ ಸಮಿತಿ ಹಮ್ಮಿಕೊಂಡಿರುವ ಪ್ರತಿಭಟನಾ ರ್ಯಾಲಿಯಲ್ಲಿ ವಿವಿಧ ಕಾಯಕ ಸಮಾಜದ ಜನರು ಭಾಗವಹಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಸಭೆಯಲ್ಲಿ ಒಕ್ಕೂಟದ ರಾಜ್ಯಾಧ್ಯಕ್ಷ ಭೀಮಣ್ಣ ಬೋನಾಳ, ಡೋಹರ ಕಕ್ಕಯ್ಯ ಸಮಾಜದ ಸಾಯಿಬಣ್ಣ ಹೋಳ್ಕರ್ ಹೆಳವರ ಸಮಾಜದ ಮಲ್ಲಿಕಾರ್ಜುನ ಹೆಳವರ್, ಹರಳಯ್ಯ ಸಮಾಜದ ಕಾಶಿರಾಯ ನಂದೂರ್ ಶಿವಲಿಂಗಪ್ಪ ಗೌಳಿ, ಹಡಪದ ಅಪ್ಪಣ್ಣ ಸಮಾಜದ ವೀರಣ್ಣ ಸಣ್ಣೂರು, ಮಡಿವಾಳ ಸಮಾಜದ ಧರ್ಮಣ್ಣ ಮಡಿವಾಳ, ಜೇಡರ ದಾಸಿಮಯ್ಯ ಸಮಾಜದ ರೇವಣಸಿದ್ದಪ್ಪ ಗಡ್ಡದ, ಮತ್ತು ರಮೇಶ್ ಹೊಸಮನಿ ಸಿದ್ದರಾಮೇಶ್ವರ ಸಮಾಜದ ಭಾಷಾ ಫೋರಕ ನಾಥ್, ಚೌಗುಲೆ ಮುಂತಾದ ಪದಾಧಿಕಾರಿಗಳು ಭಾಗವಹಿಸಿದ್ದರು.

ಬಿಎಸ್ಎಸ್‌ಕೆ ಕಾರ್ಖಾನೆಯ ಪುನಶ್ಚೇತನಕ್ಕೆ ಸರಕಾರ ಮುಂದಾಗಲಿ : ಅರವಿ ಬಸವನಗೌಡ



ಬೀದರ್,ಸೆ.23-

ಬಿಎಸ್ಎಸ್‌ಕೆ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ಪಾವತಿಸಬೇಕಿರುವ ಸುಮಾರು 100 ಕೋಟಿ ರೂ. ವೇತನ ಬಾಕಿ ಹಾಗೂ 20 ಕೋಟಿ ರೂ. ಇಪಿಎಫ್ ಮೊತ್ತ ಇನ್ನೂ ಬಿಡುಗಡೆಯಾಗಿಲ್ಲ. ಕಾರ್ಖಾನೆ ಮುಚ್ಚಿರುವುದರಿಂದ ಕಾರ್ಮಿಕರು ಮತ್ತು ಅವರ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಸರ್ಕಾರ ಮುಂದಾಗಬೇಕು ಎಂದು ಕರ್ನಾಟಕ ಯುನೈಟೆಡ್ ಶುಗರ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಅರವಿ ಬಸವನಗೌಡ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಸುಮಾರು 82 ಸಕ್ಕರೆ ಕಾರ್ಖಾನೆಗಳಲ್ಲಿ ತ್ರಿಪಕ್ಷೀಯ ವೇತನ ಸಮಿತಿಯ ನಿಯಮಗಳನ್ನು ಜಾರಿಗೊಳಿಸಿಲ್ಲ ಎಂದು ಆರೋಪಿಸಿದರು. ಕನಿಷ್ಠ ವೇತನವೂ ನೀಡದೆ ಕಾರ್ಮಿಕರಿಂದ ಕೇವಲ 8,000 ರೂ. ರಿಂದ 10,000 ರೂ. ಸಂಬಳಕ್ಕೆ ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ ಎಂದು ದೂರಿದರು.

ರಾಜ್ಯದ ಬಹುತೇಕ ಸಕ್ಕರೆ ಕಾರ್ಖಾನೆಗಳು ಶಾಸಕರು, ಸಚಿವರು ಹಾಗೂ ಪ್ರಭಾವಿ ರಾಜಕಾರಣಿಗಳ ಒಡೆತನದಲ್ಲಿರುವುದರಿಂದ ಕಾರ್ಮಿಕ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಲು ಅಸಹಾಯಕರಾಗಿದ್ದಾರೆ ಎಂದು ಅವರು ಹೇಳಿದರು.

ಸಹಕಾರಿ ರಂಗದ ಸಕ್ಕರೆ ಕಾರ್ಖಾನೆಗಳನ್ನು 30 ವರ್ಷಗಳ ದೀರ್ಘಾವಧಿಗೆ ಖಾಸಗಿಯವರಿಗೆ ಗುತ್ತಿಗೆಗೆ ನೀಡುತ್ತಿರುವುದು ರೈತರು ಮತ್ತು ಕಾರ್ಮಿಕರಿಗೆ ಯಾವುದೇ ಪ್ರಯೋಜನ ತರುತ್ತಿಲ್ಲ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಕಾರ್ಮಿಕರ ಸಮಸ್ಯೆಗಳ ಕುರಿತು ಚಾಮರಾಜನಗರದಿಂದ ಬೀದರ್‌ವರೆಗೆ ಜಾಗೃತಿ ಅಭಿಯಾನ ನಡೆಸಲಾಗುತ್ತಿದೆ. ಸರ್ಕಾರ ಸೂಕ್ತ ಸ್ಪಂದನೆ ನೀಡದಿದ್ದರೆ ಸೆಪ್ಟೆಂಬರ್ 27ರಂದು ಬೆಳಗಾವಿಯಲ್ಲಿ ಹಾಗೂ ಬಳಿಕ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ ಮಾತನಾಡಿ, ಸಕ್ಕರೆ ಕಾರ್ಮಿಕರ ಉದ್ಯೋಗ ಭದ್ರತೆ ಹಾಗೂ ತ್ರಿಪಕ್ಷೀಯ ವೇತನ ಮಂಡಳಿ ಶಿಫಾರಸ್ಸು ಗಳನ್ನು ಜಾರಿಗೊಳಿಸುವಂತೆ ಆಗ್ರಹಿಸಿ ಸೆಪ್ಟೆಂಬರ್ 27ರಂದು ಬೆಳಗಾವಿಯಲ್ಲಿ ರಾಜ್ಯ ಮಟ್ಟದ ಬೃಹತ್ ಸಕ್ಕರೆ ಕಾರ್ಮಿಕರ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಫೆಡರೇಷನ್ ಕಾರ್ಯಾಧ್ಯಕ್ಷ ಜಿ.ಎಸ್ ಚಕ್ರಪಾಣಿ, ಎಐಯುಟಿಯುಸಿ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಎಸ್.ಎಂ ಶರ್ಮಾ, ಆಳಂದ್ ಎನ್ಎಸ್ಎಲ್ ಸಕ್ಕರೆ ಕಾರ್ಖಾನೆಯ ಕಾರ್ಮಿಕ ಮುಖಂಡ ಶರಣಬಸಪ್ಪ ಕಲಶೆಟ್ಟಿ ಹಾಗೂ ಶಾಂತಪ್ಪ ಹಳ್ಳಿಖೇಡ್ ಸೇರಿದಂತೆ ಇತರರು ಇದ್ದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ -ಪ್ರೊ. ಎ. ಪಿ. ಜ್ಞಾನ ಪ್ರಕಾಶ

ಧಾರವಾಡ,ಸೆ.23-

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಕಳೆದ 31 ವರ್ಷಗಳಿಂದ 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯ ದೊಂದಿಗೆ 18 ವರ್ಷ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿರುವ ಲಕ್ಷಾಂತರ ಅಭ್ಯರ್ಥಿಗಳಿಗೆ ವಿದ್ಯೆ ನೀಡಿ, ವಿದ್ಯಾರ್ಥಿಗಳ ಮನೆ ಬಾಗಿಲಿಗೆ ಉನ್ನತ ಶಿಕ್ಷಣ ನೀಡುತ್ತಾ ಬರುತ್ತಿದೆ. ಎಲ್ಲರೂ ಈ ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎ. ಪಿ. ಜ್ಞಾನ ಪ್ರಕಾಶರವರು ಹೇಳಿದರು.

ಅವರು ಇಂದು (ಸೆ.22) ರಂದು ಧಾರವಾಡ ಸರ್ಕ್ಯೂಟ್ ಹೌಸ್‌ನಲ್ಲಿ ಪತ್ರಿಕಾಗೋಷ್ಠಿ ಜರುಗಿಸಿ ಮಾತನಾಡಿದರು. ಯುಜಿಸಿ ನಿಯಮಾವಳಿ ಪ್ರಕಾರ ಪೂರ್ಣಾವಧಿಯಲ್ಲಿ ಮತ್ತು ದೂರ ಶಿಕ್ಷಣದಲ್ಲಿ ಏಕಕಾಲದಲ್ಲೇ ಎರಡು ಪದವಿ ಮತ್ತು ಸ್ನಾತಕೋತ್ತರ ಕೋರ್ಸ್ ವ್ಯಾಸಂಗ ಮಾಡಲು ಅವಕಾಶವಿರುತ್ತದೆ ಎಂದು ತಿಳಿಸಿದರು.

ಕರಾಮುವಿ ಶೈಕ್ಷಣಿಕ ಗುಣಮಟ್ಟಕ್ಕೆ ನ್ಯಾಕ್ ನಿಂದ ಂ+ ಗ್ರೇಡ್ ದೊರೆತಿರುತ್ತದೆ. ದೇಶದ 18 ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಎನ್ಐಆರ್ಎಫ್ ಈ ಶ್ರೇಯಾಂಕದ ಪ್ರಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ2ನೇ ಸ್ಥಾನದಲ್ಲಿದ್ದು, ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳ ಪೈಕಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಸಾಂಪ್ರದಾಯಿಕ ವಿ.ವಿ. ಗಳು ನೀಡುವ ಪದವಿಗಳು ಮತ್ತು ಕರಾಮುವಿ ನೀಡುವ



ಪದವಿಗಳು ಸಮಾನ ಅರ್ಹತೆಯನ್ನು ಪಡೆದಿರುತ್ತದೆ ಎಂದು ಹೇಳಿದರು.

ಪ್ರಸ್ತುತ 2026-27ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿಯು ಜೂನ್ 22. 2026 ರಿಂದ ಪ್ರಾರಂಭವಾಗಿದ್ದು, ಯುಜಿಸಿ ಅನುಮೋದಿತ ಸ್ನಾತಕ, ಸ್ನಾತಕೋತ್ತರ ಪದವಿ ಕೋರ್ಸ್ ಗಳಾದ ಬಿ.ಎ., ಬಿ.ಕಾಂ., ಬಿ.ಬಿ.ಎ., ಬಿ.ಸಿ.ಎ, ಬಿ.ಎಸ್.ಡಬ್ಲ್ಯು, ಬಿ. ಎಲ್.ಐ.ಎಸ್ಸಿ , ಬಿ.ಎಡ್.(ಸಿ.ಇ. ಟಿ. ಮುಖಾಂತರ) ಬಿ.ಎಸ್ಸಿ . -ಜನರಲ್, ಬಿ.ಎಸ್ಸಿ , ಐ.ಟಿ., ಎಂ.ಎ., ಎಂ.ಸಿ.ಜೆ., ಎಂ.ಕಾಂ., ಎಂ.ಎಲ್.ಐ.ಎಸ್ಸಿ ., ಎಂ.ಸಿ.ಎ., ಎಂ.ಎಸ್.ಡಬ್ಲ್ಯೂ, ಎಂ.ಎಸ್ಸಿ , ಎಂ.ಬಿಎ., ಪಿ.ಜಿ. ಸರ್ಟಿಫಿಕೇಟ್ ಪ್ರೋಗ್ರಾಮ್ಸ್ ಯು.ಜಿ. ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಪ್ರೋಗ್ರಾಮ್ಸ್ "ಗಳಿಗೆ ಪ್ರವೇಶಾತಿ ಪ್ರಕ್ರಿಯೆಗಳು ಪ್ರಾರಂಭಗೊಂಡಿವೆ ಎಂದು ಹೇಳಿದರು.

ಕರಾಮುವಿಯ ಅಧಿಕೃತ ವೆಬ್‌ಸೈಟ್... ಮೂಲಕ ಅಕ್ಟೋಬರ್ 13 ರೊಳಗಾಗಿ ಪದವಿಗಳಿಗೆ ಅರ್ಜಿ ಸಲ್ಲಿಸಬೇಕು. ಕರಾಮುವಿ ಹೆಸರಿನಲ್ಲಿ ಅಧಿಕ ಶುಲ್ಕ ಪಾವತಿಸಿ ವಿದ್ಯಾರ್ಥಿಗಳು ವಂಚನೆಗೆ ಒಳಗಾಗಬಾರದು. ಅನಧಿಕೃತ ಕೇಂದ್ರಗಳು ಮತ್ತು ವ್ಯಕ್ತಿಗಳ ಬಗ್ಗೆ ಎಚ್ಚರ ವಹಿಸಬೇಕು. ಸಾಂಪ್ರದಾಯಿಕ ವ್ಯವಸ್ಥೆಯಡಿ ಇತರ ಕಾಲೇಜಿನಲ್ಲಿ ಅಥವಾ ರೆಗ್ಯುಲರ್ ಆಗಿ ಓದುತ್ತಿರುವ ವಿದ್ಯಾರ್ಥಿಗಳು ಮೊದಲ ವರ್ಷ ವ್ಯಾಸಂಗ ಮಾಡಿ, ಕಾರಣಾಂತರಗಳಿಂದ ಓದಲು ಆಗದಿದ್ದರೆ ಅಥವಾ ರೆಗ್ಯುಲರ್ ಆಗಿ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗದಿದ್ದರೆ, ಅಂತಹ ವಿದ್ಯಾರ್ಥಿಗಳು ಈ ವಿಶ್ವವಿದ್ಯಾನಿಲಯದ ಅರ್ಹತಾ ಮಾನದಂಡಗಳನ್ನು ಪೂರೈಸಿ 2ನೇ ಮತ್ತು 3ನೇ ವರ್ಷಕ್ಕೆ ಮುಕ್ತ ವಿವಿಯಲ್ಲಿ ಲ್ಯಾಟರಲ್ ಪ್ರವೇಶ ಅಥವಾ ನೇರ ಪ್ರವೇಶ ಆಯ್ಕೆ ಮಾಡಿಕೊಂಡು ವಿದ್ಯಾಭ್ಯಾಸ ಮುಂದುವರೆಸಬಹುದು ಎಂದು ಹೇಳಿದರು.

10 ಆನ್‌ಲೈನ್ ಕೋರ್ಸ್‌ಗಳಾಗಿವೆ. ಅರ್ಹ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ, ತೃತೀಯ ಲಿಂಗದ ವಿದ್ಯಾರ್ಥಿಗಳಿಗೆ, ಶೇ. 50ಕ್ಕೂ ಹೆಚ್ಚಿನ ದೃಷ್ಟಿಹೀನ ವಿದ್ಯಾರ್ಥಿಗಳಿಗೆ, ಕೋವಿಡ್-19ರ ಸಾಂಕ್ರಾಮಿಕ ರೋಗದಿಂದ ಮೃತರಾದ ಆ ತಂದೆ, ತಾಯಿಯ ಮಕ್ಕಳಿಗೆ ಅವರು ಉಚಿತ ಪ್ರವೇಶಾತಿ ನೀಡಲಾಗುವುದು ಎಂದು ಹೇಳಿದರು. ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಡಿಫೆನ್ಸ್ ಹಾಗೂ ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ, ಆಟೋ, ಕ್ಯಾಬ್ ಚಾಲಕರು ಮತ್ತು ಅವರ ಪತಿ, ಪತ್ನಿ ಹಾಗೂ ಇಬ್ಬರು ಮಕ್ಕಳಿಗೆ, ,,, ನೌಕರುಗಳಿಗೆ ಬೋಧನಾ ಶುಲ್ಕದಲ್ಲಿ ಶೇ10 ರಷ್ಟು ರಿಯಾಯಿತಿಯು ನೀಡಲಾಗುವುದು ಎಂದು ಹೇಳಿದರು.

ಕರಾಮುವಿಯಲ್ಲಿ ಪ್ರವೇಶಾತಿ ಪಡೆಯುವ ಎಸ್ಸಿ ,ಎಸ್‌ಟಿ ವರ್ಗದ ಅರ್ಹ ವಿದ್ಯಾರ್ಥಿಗಳಿಗೂ ಅಗತ್ಯ ದಾಖಲೆಗಳನ್ನು ಒದಗಿಸಿದಲ್ಲಿ ಎಸ್‌ಎಸ್‌ಪಿ ಮುಖಾಂತರ ವಿದ್ಯಾರ್ಥಿ ವೇತನವಿರುತ್ತದೆ ಅಥವಾ ಪೂರ್ಣ ಶುಲ್ಕ ಮರುಭರಿಕೆಯಾಗುತ್ತದೆ.

ಕ'.ರಾ.ವ'ು.ವಿ.ಯ ವೈಶಿಷ್ಟತೆಗಳು, ಸೌಲಭ್ಯಗಳು ಪ್ರತಿ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರ, ಪ್ರತಿ ತಾಲೂಕಿನಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಸ್ಥಾಪನೆ. ಎಲ್ಲಾ ಶೈಕ್ಷಣಿಕ ಕ್ರಮಗಳ ಕಲಿಕಾ ಅಧ್ಯಯನ ಸಾಮಗ್ರಿ, ಡಿಜಿಟಲೀಕರಣ, ಪ್ರತ್ಯೇಕನ ಮುಖಾಂತರ ವಿದ್ಯಾರ್ಥಿಗಳು ತಮ್ಮ ಕೋರ್ಸ್‌ಗೆ ಸಂಬಂಧ ಪಟ್ಟ ಎಲ್ಲಾ ಇನ್ನಿತರ ಮಾಹಿತಿಗಳನ್ನು ಒಂದೇ ನಲ್ಲಿ ಪಡೆಯಬಹುದು.

ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಆನ್‌ಲೈನ್‌ನಲ್ಲಿ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಕರಾಮುವಿ ದೃಶ್ಯವಾಹಿನಿ ಎಂಬ ಹೆಸರಿನ ಯುಟ್ಯೂಬ್ ಚಾನೆಲ್ ಕಾರ್ಯನಿರ್ವಹಿಸುತ್ತಿದೆ. ಇದರಲ್ಲಿ ಅಧ್ಯಾಪಕರ ಬೋಧನಾ ವಿಡಿಯೋಗಳು ಹಾಗೂ ಕ.ರಾ.ಮು.ವಿಯಲ್ಲಿ ನಡೆಯುವಂತಹ ಶೈಕ್ಷಣಿಕ, ಶ'ೖಕ್ಷ'ಣಿಕ'ೕತ'ರ' ಕಾರ್ಯಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ವಿಡಿಯೋ ಮುಖಾಂತರ ನೀಡಲಾಗುತ್ತಿದೆ. ಕ.ರಾ.ಮು.ವಿ. ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಮೂಲಕ ಅತ್ಯಂತ ಕನಿಷ್ಠ ಶುಲ್ಕದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳು ವಸತಿಯೊಂದಿಗೆ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಗೊಂದಲಗಳನ್ನು ಬಗೆಹರಿಸುವ ಸಲುವಾಗಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಂಕಪಟ್ಟಿಗಳು ಮತ್ತು ಪದವಿ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗಳ ವಿಳಾಸಕ್ಕೆ ರಿಜಿಸ್ಟರ್ ಅಂಚೆಯ ಮೂಲಕ ರ'ವಾನಿಸ'ಲಾಗ'ುವ'ುದ'ು. ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ರಾಜ್ಯದಾದ್ಯಂತ 70ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳಿವೆ. ಕ'ನರ್ಾಟಕ'ದಾದ'್ಯಂತ' ವಿದ್ಯಾರ್ಥಿಗಳು, ಆಸಕ್ತರು ಹತ್ತಿರದ ಜಿಲ್ಲಾ ಪ್ರಾದೇಶಿಕ ಕೇಂದ್ರ ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳಿಗೂ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ ಎಂದು ಹೇಳಿದರು.

ಪ'ತ್ರಿಕಾಗ'ೋಷ್ಠಿಯಲ್ಲಿ ಕರಾಮುವಿಯ ಡೀನ್ (ಆ.ಕೇ.) ಡಾ.ಎನ್.ಆನಂದಗೌಡರವರು ಮತ್ತು ಧಾರವಾಡದ ಕರಾಮುವಿ ಪ್ರಾದೇಶಿಕ ಕೇಂದ್ರ, ಪ್ರಾದೇಶಿಕ ನಿರ್ದೇಶಕರಾದ ಡಾ. ಲೋಕೇಶ, ಆರ್ ಮತ್ತು ಗದಗ, ಹಾವೇರಿ,ಬಾಗಲಕೋಟೆಯ ಪ್ರಾದೇಶಿಕ ಕೇಂದ್ರಗಳ ಪ್ರಾದೇಶಿಕ ನಿರ್ದೇಶಕರುಗಳು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಬಿಜೆಪಿ, ಭಕ್ತರು ಮತ್ತು ಸಾರ್ವಜನಿಕ ಸಭ್ಯತೆ

ದೇಶದ ರಾಜಕೀಯ ಇತಿಹಾಸವನ್ನು ತಿಳಿಯದ, ಮಹನೀಯರ ನಡೆ-ನುಡಿಗಳನ್ನು ಅರಿಯದ; ಅರಿತರೂ ಅಳವಡಿಸಿಕೊಳ್ಳದ ಪ್ರಧಾನಿ ಮೋದಿಯವರು ಅಧಿಕಾರದ ಮದದಲ್ಲಿ, ಕಳೆದ ಹದಿಮೂರು ವರ್ಷಗಳಿಂದ ಕಾಂಗ್ರೆಸ್ ಮುಖಂಡರನ್ನು, ಮಹಿಳೆಯರನ್ನು ಸೊಂಟದ ಕೆಳಗಿನ ಭಾಷೆ ಬಳಸಿ ನಿಂದಿಸಿದರು. ಈಗ, ಅವರಾಡಿದ ಮಾತುಗಳು ಅವರಿಗೇ ತಿರುಗುಬಾಣವಾಗುತ್ತಿವೆ. ಸಂಸ್ಕಾರ ಮತ್ತು ಸಭ್ಯತೆಯ ಪಾಠ ಮಾಡುತ್ತಿವೆ.

ಕೆಲವು ಕಾರ್ಯಕರ್ತರು ಮತ್ತು ಗೂಂಡಾಗಳಿಂದ ಸರಣಿ ಬೆದರಿಕೆಗಳು ಬರುತ್ತಿರುವ ಹಿನ್ನೆಲೆಯಲ್ಲಿ, ಸುರಕ್ಷತೆಯ ದೃಷ್ಟಿಯಿಂದ ಉತ್ತರ ಪ್ರದೇಶದ ನೋಯ್ಡಾ, ಲಕ್ನೋ ಮತ್ತು ಕಾನ್ಪುರ ನಗರಗಳಲ್ಲಿ ನಡೆಯಬೇಕಿದ್ದ ಮೂರು ಕಾಮಿಡಿ ಶೋಗಳನ್ನು ರದ್ದು ಮಾಡುತ್ತಿದ್ದೇನೆ ಎಂದು ಸ್ಟಾಂಡ್ ಅಪ್ ಕಾಮಿಡಿಯನ್ ಪುಲ್ಕಿತ್ ಮಣಿ ಕೊಂಚ ವಿಷಾದದಿಂದಲೇ ಹೇಳಿದ್ದಾರೆ.

ಇದಕ್ಕೆ ಕಾರಣ, ಮಧ್ಯಪ್ರದೇಶದ ಇಂದೋರ್‌ನಲ್ಲಿ ಸೆ. 19ರಂದು ಕಾಂಗ್ರೆಸ್ ಆಯೋಜಿಸಿದ್ದ ಛಾತ್ರೋನ್ ಕೀ ಗೂಂಜ್ ವಿದ್ಯಾರ್ಥಿ ಸಂವಾದ ಕಾರ್ಯಕ್ರಮ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ನೇತೃತ್ವದ ಆ ಕಾರ್ಯಕ್ರಮದಲ್ಲಿ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಯುವಜನರು ಸೇರಿದ್ದರು. ಆ ಕಾರ್ಯಕ್ರಮದ ವೇದಿಕೆಯಲ್ಲಿ ರಾಹುಲ್ ಸಮ್ಮುಖದಲ್ಲಿ ಸ್ಟಾಂಡ್ ಅಪ್ ಕಾಮಿಡಿಯನ್ ಪುಲ್ಕಿತ್, ಪ್ರಧಾನಿ ನರೇಂದ್ರ ಮೋದಿಯವರು ವಿದೇಶಿ ನಾಯಕರನ್ನು ಅಪ್ಪಿಕೊಳ್ಳುವ ಶೈಲಿ ಹಾಗೂ ಅವರ ಭಾಷಣದ ಹಾವಭಾವಗಳನ್ನು ಅನುಕರಿಸಿದ್ದರು. ಅಷ್ಟೇ ಅಲ್ಲ, ಪ್ರಧಾನಿ ಮೋದಿಯವರು ಈ ಹಿಂದೆ ಕಾರ್ಯಕ್ರಮವೊಂದರಲ್ಲಿ ವಯಸ್ಸಾದ ಮಹಿಳೆಗೆ ಕುರ್ಚಿ ನೀಡಲು ಹೇಳಿದ್ದ ಘಟನೆಯನ್ನು ಉಲ್ಲೇಖಿಸಿ, ಪ್ರೇಕ್ಷಕರ ಕಡೆಗೆ ಕೈ ತೋರಿಸುತ್ತಾ ಮಾ ಕೋ ಕುರ್ಸಿ ದೋ, ಮಾ ಎಂದು ಹಾಸ್ಯ ಮಾಡಿದ್ದರು. ಅದನ್ನು ಕಂಡು ರಾಹುಲ್ ಗಾಂಧಿ ನಕ್ಕಿದ್ದರು.

ರಾಹುಲ್ ಗಾಂಧಿ ನಕ್ಕಿದ್ದು ಈಗ ಘನಘೋರ ಕೃತ್ಯವಾಗಿದೆ. ದೇಶದ ಪ್ರಧಾನಿಯವರ ದಿವಂಗತ ತಾಯಿಯನ್ನು ಅಪಹಾಸ್ಯ ಮಾಡಿದ್ದು ಮಹಾಪರಾಧವಾಗಿದೆ. ಕಾಮಿಡಿಯನ್ ಪುಲ್ಕಿತ್‌ಗೆ ಕೊಲೆ ಬೆದರಿಕೆ ಹಾಕಿದರೆ; ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಗೆ ಸಾರ್ವಜನಿಕ ಸಭ್ಯತೆಯ ಪಾಠ ಮಾಡಲಾಗುತ್ತಿದೆ. ಬಿಜೆಪಿ ಭಕ್ತರಿಗೆ, ಸಂಘದ ಕಾರ್ಯಕರ್ತರಿಗೆ, ನಾಯಕರಿಗೆ ಈಗ ಸಂಸ್ಕಾರ, ಸನ್ನಡತೆ, ಸಭ್ಯತೆ, ನೈತಿಕತೆ ನೆನಪಾಗಿದೆ.

ಅಸಲಿಗೆ, ಪುಲ್ಕಿತ್ ಅವರ ಮಿಮಿಕ್ರಿಯಲ್ಲಿ ಯಾರ ಹೆಸರನ್ನೂ ಪ್ರಸ್ತಾಪಿಸಿರಲಿಲ್ಲ, ಯಾರ ಧ್ವನಿಯನ್ನೂ ಅನುಕರಣೆ ಮಾಡಿರಲಿಲ್ಲ, ಯಾರಂತೆಯೂ ಮೇಕಪ್ ಮಾಡಿಕೊಂಡಿರಲಿಲ್ಲ. ಮಿಮಿಕ್ರಿ ಮಾಡಿ ನಗಾಡಿದ್ದರು. ಹಾಗಿದ್ದರೂ, ಅದು ಮೋದಿಯವರ ಕುರಿತು ಮಾಡಿದ ಗೇಲಿ ಎಂದು ಬಿಜೆಪಿಗರು ಯಾಕೆ ಅಂದುಕೊಂಡಿದ್ದಾರೆ? ಅಥವಾ ರಾಹುಲ್ ಗಾಂಧಿಯವರ ವಿದ್ಯಾರ್ಥಿ ಸಂವಾದ ಕಾರ್ಯಕ್ರಮ ಸೃಷ್ಟಿಸುತ್ತಿರುವ ಸಂಚಲನಕ್ಕೆ ಸಂಘಪರಿವಾರ, ಬಿಜೆಪಿ ಮತ್ತು ಮೋದಿ ವಿಚಲಿತರಾಗಿದ್ದಾರೆಯೇ?

ಸತ್ಯವನ್ನು ಸರಿಯಾದ ಸಮಯಕ್ಕೆ ಗುರುತಿಸಿ ದೇಶದ ಹಿತಕ್ಕಾಗಿ ದನಿ ಎತ್ತುವ ನಾಯಕತ್ವವನ್ನು ಬೆಂಬಲಿಸುವುದು ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ರಾಹುಲ್ ಅವರ ಛಾತ್ರೋನ್ ಕೀ ಗೂಂಜ್ ಕಾರ್ಯಕ್ರಮ ಮತ್ತು ಪುಲ್ಕಿತ್ ಅವರ ಸ್ಟಾಂಡ್ ಅಪ್ ಕಾಮಿಡಿ ಅಪರಾಧವೂ ಅಲ್ಲ, ಅಸಭ್ಯವೂ ಅಲ್ಲ.

ಒಂದು ವೇಳೆ, ಪುಲ್ಕಿತ್ ಮಾಡಿದ ವಿಡಂಬನೆಗೆ ರಾಹುಲ್ ಗಾಂಧಿ ಸಾರ್ವಜನಿಕವಾಗಿ ನಕ್ಕಿದ್ದು ತಪ್ಪು ಎಂದಾದರೆ, ಇದೇ ರಾಹುಲ್ ಗಾಂಧಿಯವರ ವಿಡಿಯೋ-ಫೋಟೋಗಳನ್ನು ನಕಲಿಸಿ-ಸಂಕಲಿಸಿ ಕಳೆದ ಹದಿಮೂರು ವರ್ಷಗಳಿಂದ ನಿರಂತರವಾಗಿ ಪಪ್ಪು ಎಂದು ಕರೆದು ಹೀಯಾಳಿಸಿದ್ದು ತಪ್ಪಲ್ಲವೇ?

ಹಾಗೆಯೇ ಮೋದಿಯವರ ದಿವಂಗತ ತಾಯಿಯನ್ನು ಅಪಹಾಸ್ಯ ಮಾಡಿದ್ದು ಮಹಾಪರಾಧ ಎಂದರೆ, ರಾಹುಲ್ ಗಾಂಧಿಯವರ ವಯೋವೃದ್ಧ ತಾಯಿಯನ್ನು ಜರ್ಸಿ ಹಸು, ಕಾಂಗ್ರೆಸ್ ವಿಧವೆ ಎಂದು ಸ್ವತಃ ಪ್ರಧಾನಿ ಮೋದಿಯವರೇ ಸಾರ್ವಜನಿಕವಾಗಿ ಗೇಲಿ ಮಾಡುವಾಗ ಎಲ್ಲಿತ್ತು ಬಿಜೆಪಿಗರ ನೈತಿಕತೆ? ಸೋನಿಯಾ ಗಾಂಧಿಯವರ ಫೋಟೋ-ವಿಡಿಯೋಗಳನ್ನು ಎಐ ಬಳಸಿ ಅಸಭ್ಯ-ಅಶ್ಲೀಲವಾಗಿ ಚಿತ್ರಿಸಿ, ಟ್ರೋಲ್‌ಗೆ ಬಳಸಿ ಗೇಲಿ ಮಾಡುತ್ತಿದ್ದಾಗ ಎಲ್ಲಿಗೆ ಹೋಗಿತ್ತು, ಬಿಜೆಪಿ ಭಕ್ತರ ಸಂಸ್ಕಾರ ಮತ್ತು ಸಭ್ಯತೆ?

ವಿರೋಧ ಪಕ್ಷದ ನಾಯಕರನ್ನು ನಿರಂತರವಾಗಿ ಅವಹೇಳನ ಮಾಡಿ ರಾಜಕೀಯ ಲಾಭ ಪಡೆದವರು, ಈಗ ತಮ್ಮ ವಿರುದ್ಧ ಸಣ್ಣ ವಿಡಂಬನೆ ಬಂದ ತಕ್ಷಣ ತಾಯಿಯನ್ನು ಎಳೆದು ತರುವುದು, ಸಂಸ್ಕಾರದ ಮಾತುಗಳನ್ನಾಡುವುದು-ರಾಜಕೀಯ ನಾಟಕವಲ್ಲವೇ? ಕಳೆದ ಒಂದೂವರೆ ದಶಕದಿಂದ ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ಐಟಿ ಸೆಲ್ ನಡೆಸಿದ ದುಷ್ಟ ಅಶ್ಲೀಲ ಅಸಭ್ಯ ಪ್ರಚಾರವನ್ನು ದೇಶದ ಜನತೆ ನೋಡಿಲ್ಲವೇ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಸ್ಥ ನಾಯಕರನ್ನು ಮತ್ತು ಅವರ ಪ್ರಚಾರ ವೈಖರಿಯನ್ನು ಹಾಸ್ಯ ವಿಡಂಬನೆಯ ಮೂಲಕ ಪ್ರಶ್ನೆ ಮಾಡುವುದು ಸಹಜ. ಅದು ಸಂವಿಧಾನ ಕಲ್ಪಿಸಿಕೊಟ್ಟಿರುವ ರಾಜಕೀಯ ಹಕ್ಕು. ಅದಕ್ಕೆ ಅತ್ಯುತ್ತಮ ಉದಾಹರಣೆಯಾಗಿ ಪಂಡಿತ್ ನೆಹರೂ ಮತ್ತು ವ್ಯಂಗ್ಯಚಿತ್ರಕಾರ ಶಂಕರ್ ಅವರ ಪ್ರಸಂಗವನ್ನು ನೆನಪು ಮಾಡಿಕೊಳ್ಳಬಹುದು.

ಭಾರತದ ರಾಜಕೀಯ ವ್ಯಂಗ್ಯಚಿತ್ರ ರಂಗದ ಪಿತಾಮಹ ಎಂದು ಕರೆಯಲ್ಪಡುವ ಶಂಕರ್, ಪ್ರಧಾನಿ ನೆಹರೂ ಅವರ ನೀತಿಗಳನ್ನು ತೀಕ್ಷ್ಣವಾಗಿ ಟೀಕಿಸಿ ನಾಲ್ಕು ಸಾವಿರಕ್ಕೂ ಹೆಚ್ಚು ಕಾರ್ಟೂನ್‌ಗಳನ್ನು ಬಿಡಿಸಿದ್ದರು. ಆದರೆ ನೆಹರೂ ಅವರು ಆ ಟೀಕೆಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿದ್ದರು. ಅಷ್ಟೇ ಅಲ್ಲ, ಶಂಕರ್ಸ್ ವೀಕ್ಲಿ ಪತ್ರಿಕೆಯ ಉದ್ಘಾಟನಾ ಸಮಾರಂಭಕ್ಕೆ ಬಂದು, ನನ್ನನ್ನು ಬಿಡಬೇಡ ಶಂಕರ್, ನನ್ನ ಮೇಲೂ ವ್ಯಂಗ್ಯಚಿತ್ರ ಬಿಡಿಸು ಎಂದು ಬಹಿರಂಗವಾಗಿ ಬೆನ್ನು ತಟ್ಟಿದ್ದರು.

ಹಾಗೆಯೇ, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ, ಸೋನಿಯಾ ಗಾಂಧಿ ಮತ್ತು ಮನಮೋಹನ್ ಸಿಂಗ್ ಅವರನ್ನು ಅನುಕರಿಸುವ ರಾಜಕೀಯ ಅಣಕು ಪ್ರಹಸನವು ರಾಷ್ಟ್ರೀಯ ಕಿರುತೆರೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಸಾರವಾಗಿತ್ತು. ಅಂದು ಪ್ರಧಾನಿಯಾಗಿದ್ದವರನ್ನೇ ಬಹಿರಂಗವಾಗಿ ಹಾಸ್ಯ ಮಾಡಿದರೂ ಯಾವೊಬ್ಬ ಕಾಂಗ್ರೆಸ್ ನಾಯಕನೂ ಆ ಕಲಾವಿದರ ಮೇಲೆ ಮುಗಿಬೀಳಲಿಲ್ಲ, ಚಾನೆಲ್ ಮೇಲೆ ಕೇಸ್ ಹಾಕಲಿಲ್ಲ, ಕಲಾವಿದರಿಗೆ ಬೆದರಿಕೆ ಹಾಕಲಿಲ್ಲ. ಅಂದು ಪ್ರಜಾಪ್ರಭುತ್ವದ ಆಶಯಗಳಿಗೆ ತಕ್ಕಂತೆ ಕಲಾವಿದರ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ರಾಜಕೀಯ ಅಣಕುಗಳನ್ನು ಗೌರವಿಸುವ ಹಾಗೂ ಸಹಿಸಿಕೊಳ್ಳುವ ಕನಿಷ್ಠ ಸೌಜನ್ಯವಿತ್ತು. ಆದರೆ ಇಂದು ದೇಶದಲ್ಲಾಗುತ್ತಿರುವುದೇನು ಎಂಬ ಪ್ರಶ್ನೆ ಪ್ರತಿಯೊಬ್ಬ ನಾಗರಿಕನನ್ನೂ ಕಾಡುತ್ತಿದೆ.

ದೇಶದ ರಾಜಕೀಯ ಇತಿಹಾಸವನ್ನು ತಿಳಿಯದ, ಮಹನೀಯರ ನಡೆ-ನುಡಿಗಳನ್ನು ಅರಿಯದ; ಅರಿತರೂ ಅಳವಡಿಸಿಕೊಳ್ಳದ ಪ್ರಧಾನಿ ಮೋದಿಯವರು ಅಧಿಕಾರದ ಮದದಲ್ಲಿ, ಕಳೆದ ಹದಿಮೂರು ವರ್ಷಗಳಿಂದ ಕಾಂಗ್ರೆಸ್ ಮುಖಂಡರನ್ನು, ಮಹಿಳೆಯರನ್ನು ಸೊಂಟದ ಕೆಳಗಿನ ಭಾಷೆ ಬಳಸಿ ನಿಂದಿಸಿದರು. ಮೋದಿಯವರ ಮಾತಿಗೆ ಮರುಳಾದ, ಮೆದುಳನ್ನು ಮಾರಿಕೊಂಡ, ಪ್ರಶ್ನಿಸುವ ಕೆಚ್ಚನ್ನೇ ಕಳೆದುಕೊಂಡ ಭಕ್ತರು ಆನಂದಿಸಿದರು. ಈಗ, ಕಾಲ ಚಕ್ರ ಉರುಳಿದಂತೆ, ಅವರಾಡಿದ ಮಾತುಗಳು ಅವರಿಗೇ ತಿರುಗುಬಾಣವಾಗುತ್ತಿವೆ. ಸಂಸ್ಕಾರ ಮತ್ತು ಸಭ್ಯತೆಯ ಪಾಠ ಮಾಡುತ್ತಿವೆ.

ಮೋದಿಯವರೇನೋ ಮಾಡಿದ್ದನ್ನು ಉಣ್ಣುತ್ತಿದ್ದಾರೆ, ಮೋದಿಯವರನ್ನು ಕಣ್ಣುಮುಚ್ಚಿ ಬೆಂಬಲಿಸಿದ ಭಕ್ತರ ಕತೆಯೇನು?

ಪತ್ರಿಕೆ ಓದುವ
ಹವ್ಯಾಸ ಬೆಳಸಿಕೊಳ್ಳಿ

ಬರದ ಬೇಗೆಯಲ್ಲಿ ರಾಜ್ಯ ಬೆಂದರೂ ಅನುದಾನಕ್ಕ ದನಿ ಎತ್ತದ 'ಮೋದಿ ಜಪ'ದ ಸಂಸದರು

ಸದಾ ಕಾಲ ಮೋದಿ ಜಪ ಮಾಡುತ್ತಾ, ಕೇವಲ ರಾಜಕೀಯಕ್ಕಾಗಿ ಮತ್ತು ಪಕ್ಷದ ಅಜೆಂಡಾಗಳಿಗಾಗಿ ರಾಜ್ಯಾದ್ಯಂತ ಸುತ್ತುವ ಈ ಸಂಸದರಿಗೆ, ನಾಡಿನ ಜನತೆ ಬರಗಾಲದ ತೀವ್ರ ಸಂಕಷ್ಟದಲ್ಲಿ ಬೆಂದು ಹೋಗುತ್ತಿರುವಾಗ ಅದೇ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರವನ್ನು ನೇರವಾಗಿ ಪ್ರಶ್ನಿಸುವ ಎದೆಗಾರಿಕೆ ಏಕೆ ಬರುತ್ತಿಲ್ಲ? ಎಂಬುದು ಪ್ರಜ್ಞಾವಂತ ಕನ್ನಡಿಗರ ಆಕ್ರೋಶದ ಪ್ರಶ್ನೆಯಾಗಿದೆ. ಅನ್ನದಾತರು ಬೀದಿಗೆ ಬಿದ್ದಿರುವಾಗ ಮೌನಕ್ಕೆ ಶರಣಾಗುವ ಇವರು, ರಾಜ್ಯದ ಹಿತಕ್ಕಿಂತ ಪಕ್ಷದ ವರಿಷ್ಠರ ಓಲೈಕೆಯೇ ಮುಖ್ಯ ಎಂಬಂತೆ ವರ್ತಿಸುತ್ತಿರುವುದು ಅವರ ಬದ್ಧತೆಯನ್ನೇ ಪ್ರಶ್ನಿಸುವಂತಿದೆ.

ರಾಜ್ಯದಲ್ಲಿ ಮತ್ತೊಮ್ಮೆ ಭೀಕರ ಬರದ ಕರಾಳ ಛಾಯೆ ಆವರಿಸಿದ್ದು, ಪರಿಹಾರದ ವಿಚಾರವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವಿನ ಹಗ್ಗಜಗ್ಗಾಟ ಮತ್ತೆ ಮುನ್ನೆಲೆಗೆ ಬಂದಿದೆ. ಪ್ರಸಕ್ತ 2026ನೇ ಸಾಲಿನಲ್ಲಿ ಈಗಾಗಲೇ 177 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿರುವ ರಾಜ್ಯ ಸರ್ಕಾರ, ಕೇಂದ್ರಕ್ಕೆ ₹3,705.30 ಕೋಟಿ ಪರಿಹಾರದ ಬೇಡಿಕೆ ಸಲ್ಲಿಸಿದೆ. ಸೆಪ್ಟೆಂಬರ್ 10ರಂದು ಮೊದಲ ಮನವಿ ಸಲ್ಲಿಸಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಇಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಒಟ್ಟು ಬೇಡಿಕೆಯ ಶೇ. 50ರಷ್ಟು, ಅಂದರೆ ₹1,852.65 ಕೋಟಿಯನ್ನು ಮಧ್ಯಂತರ ನೆರವಾಗಿ ತಕ್ಷಣವೇ ಬಿಡುಗಡೆ ಮಾಡುವಂತೆ ಒತ್ತಾಯಿಸಿದ್ದಾರೆ. ಪ್ರಸಕ್ತ ಸಾಲಿನ ಈ ಹೊಸ ಬೇಡಿಕೆಗೆ ಕೇಂದ್ರದಿಂದ ಅಧಿಕೃತವಾಗಿ ಇನ್ನೂ ಹಣ ಬಿಡುಗಡೆಯಾಗಿಲ್ಲವಾದ್ದರಿಂದ, ಸದ್ಯಕ್ಕೆ ಕೊಟ್ಟಿದ್ದು ಶೂನ್ಯ ಎಂದು ನಿರ್ಣಯಿಸುವುದು ತಾಂತ್ರಿಕವಾಗಿ ಸರಿಯಾಗುವುದಿಲ್ಲವಾದರೂ, ಹಿಂದಿನ ಇತಿಹಾಸವನ್ನು ಕೆದಕಿದರೆ ಆತಂಕ ದುಪ್ಪಟ್ಟಾಗುತ್ತದೆ.

ಕಳೆದ 2023ರ ಭೀಕರ ಬರದ ಇತಿಹಾಸವನ್ನು ಗಮನಿಸಿದರೆ ರಾಜ್ಯದ ಬೇಡಿಕೆ ಮತ್ತು ಕೇಂದ್ರದ ಬಿಡುಗಡೆಯ ನಡುವಿನ ಅಂತರದ ನೈಜ ಹಾಗೂ ನಿರಾಶಾದಾಯಕ ಚಿತ್ರಣ ತೆರೆದುಕೊಳ್ಳುತ್ತದೆ. ಅಂದು ರಾಜ್ಯ ಸರ್ಕಾರವು ಆರಂಭಿಕ 101 ತಾಲ್ಲೂಕುಗಳ ಅಂದಾಜು ₹18,000 ಕೋಟಿ ನಷ್ಟವನ್ನು ವಿವರಿಸಿ, ಅಂತಿಮವಾಗಿ ಒಟ್ಟು ₹18,171.44 ಕೋಟಿ ಪರಿಹಾರ ಕೋರಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಆದರೆ, ರಾಷ್ಟ್ರೀಯ ವಿಪತ್ತು ಸ್ಪಂದನಾ ನಿಧಿ (ಎನ್‌ಡಿಆರ್‌ಎಫ್) ಅಡಿಯಲ್ಲಿ ಕೇಂದ್ರ ಗೃಹ ಸಚಿವಾಲಯವು 2024-25ರಲ್ಲಿ ಬಿಡುಗಡೆ ಮಾಡಿದ್ದು ಕೇವಲ ₹3,454.22 ಕೋಟಿ ಮಾತ್ರ. ಇದು ರಾಜ್ಯ ಕೇಳಿದ ಒಟ್ಟು ಬೇಡಿಕೆಯ ಕೇವಲ ಶೇ. 19.01ರಷ್ಟು ಮಾತ್ರ. ಅಂದು ಈ ಅಲ್ಪ ಪರಿಹಾರದ ಹಣವನ್ನು ಪಡೆಯಲೂ ಕೇಂದ್ರದ ವಿಳಂಬ ಧೋರಣೆಯನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಬೇಕಾದ ದೌರ್ಭಾಗ್ಯ ಎದುರಾಗಿದ್ದು ಈಗ ಇತಿಹಾಸ.

ಇದು ಕೇವಲ 2023ರ ಕಥೆಯಲ್ಲ; ಕಳೆದ ಒಂದು ದಶಕದ ಅಧಿಕೃತ ಅಂಕಿಅಂಶಗಳನ್ನು ಲೋಕಸಭೆ ಹಾಗೂ ಪಿಐಬಿ () ದಾಖಲೆಗಳ ಮೂಲಕ ಪರಿಶೀಲಿಸಿದಾಗಲೂ ಕೇಂದ್ರದಿಂದ ರಾಜ್ಯಕ್ಕೆ ಆಗುತ್ತಿರುವ ನಿರಂತರ ಅನ್ಯಾಯ ನಿಚ್ಚಳವಾಗಿ ಗೋಚರಿಸುತ್ತದೆ. 2014-15ನೇ ಸಾಲಿನಲ್ಲಿ ರಾಜ್ಯವು ₹779.20 ಕೋಟಿ ಬೇಡಿಕೆ ಇಟ್ಟಿದ್ದಾಗ ಕೇಂದ್ರ ಮಂಜೂರು ಮಾಡಿದ್ದು ಕೇವಲ ₹200.85 ಕೋಟಿ. ಅದೇ ರೀತಿ 2015-16ರ ಮುಂಗಾರು ಹಂಗಾಮಿನಲ್ಲಿ ₹3,830.84



ಕೋಟಿ ಕೇಳಿದ್ದಾಗ ₹1,540.20 ಕೋಟಿ ಹಾಗೂ ಅದೇ ವರ್ಷದ ಹಿಂಗಾರು ಹಂಗಾಮಿನಲ್ಲಿ ₹1,417.14 ಕೋಟಿಗೆ ಕೇವಲ ₹723.23 ಕೋಟಿಯಷ್ಟೇ ಮಂಜೂರಾಗಿತ್ತು. ಈ ಅಂಕಿಅಂಶಗಳು ಪ್ರಾಕೃತಿಕ ವಿಪತ್ತಿನ ಸಂಕಷ್ಟದ ಸಮಯದಲ್ಲಿ ನೆರವು ನೀಡುವ ವಿಚಾರದಲ್ಲಿ ಕೇಂದ್ರದ ನಿರ್ಲಕ್ಷ್ಯವನ್ನು ಅನಾವರಣಗೊಳಿಸುತ್ತವೆ.

ಇನ್ನು ಕೇವಲ ಮಂಜೂರಾತಿಯಷ್ಟೇ ಅಲ್ಲ, ಮಂಜೂರಾದ ಮೊತ್ತ ಮತ್ತು ವಾಸ್ತವವಾಗಿ ಬಿಡುಗಡೆಯಾಗುವ ಮೊತ್ತದ ನಡುವೆಯೂ ಕೇಂದ್ರ ಸರ್ಕಾರ ಷರತ್ತುಗಳ ಕತ್ತರಿ ಪ್ರಯೋಗಿಸುತ್ತದೆ. ಇದಕ್ಕೆ 2016-17ರ ಮುಂಗಾರು ಹಂಗಾಮು ಸ್ಪಷ್ಟ ನಿದರ್ಶನವಾಗಿದೆ. ಅಂದು ರಾಜ್ಯವು ₹4,702.54 ಕೋಟಿ ಪರಿಹಾರ ಕೇಳಿತ್ತು. ಕೇಂದ್ರವು ₹1,782.44 ಕೋಟಿ ಮಂಜೂರು ಮಾಡಿತಾದರೂ, ರಾಜ್ಯ ವಿಪತ್ತು ಸ್ಪಂದನಾ ನಿಧಿಯ (ಎಸ್‌ಡಿಆರ್‌ಎಫ್) ₹96.92 ಕೋಟಿ ಶಿಲ್ಕನ್ನು ಹೊಂದಾಣಿಕೆ ಮಾಡಿಕೊಂಡು, ಅಂತಿಮವಾಗಿ ಎನ್‌ಡಿಆರ್‌ಎಫ್‌ನಿಂದ ಬಿಡುಗಡೆ ಮಾಡಿದ್ದು ₹1,685.52 ಕೋಟಿ ಮಾತ್ರ. ಇನ್ನು 2016-17ರ ಹಿಂಗಾರಿನಲ್ಲಿ ₹3,310.83 ಕೋಟಿಗೆ ₹795.54 ಕೋಟಿ ಮಂಜೂರಾದರೆ, 2018-19ರ ಮುಂಗಾರಿನಲ್ಲಿ ರಾಜ್ಯದ ಬೇಡಿಕೆ ₹2,434 ಕೋಟಿಗಳಾಗಿದ್ದಾಗ, ಕೇಂದ್ರ ಮಂಜೂರು ಮಾಡಿದ್ದು ಕೇವಲ ₹949.49 ಕೋಟಿ ಎಂಬುದು ರಾಜ್ಯಸಭಾ ದಾಖಲೆಗಳಿಂದ ದೃಢಪಡುತ್ತದೆ.

ಈ ಅಂಕಿಅಂಶಗಳ ಆಚೆಗೆ, ನಿರಂತರ ಬರಗಾಲವು ರೈತರ ಬದುಕಿನ ಮೇಲೆ ಬೀರುತ್ತಿರುವ ಪರಿಣಾಮಗಳು ಭೀಕರವಾಗಿವೆ. ಗ್ರಾಮೀಣ ಮಟ್ಟದಲ್ಲಿ ಕೂಲಿ ಕಾರ್ಮಿಕರಿಗೆ ಆಸರೆಯಾಗಿದ್ದ ನರೇಗಾ () ಯೋಜನೆಯ ಬದಲಿಗೆ, 2026ರ ಜುಲೈ 1ರಿಂದ ಜಾರಿಗೆ ತರಲಾಗಿರುವ ವಿಬಿ-ಜಿ ರಾವ್ ಜಿ (-) ಕಾಯ್ದೆಯಡಿಯೂ ನಿರೀಕ್ಷಿತ ಮಟ್ಟದಲ್ಲಿ ಅನುದಾನ ಹರಿಯುತ್ತಿಲ್ಲ. ಇದರಿಂದಾಗಿ ಕೂಲಿ ಕಾರ್ಮಿಕರು ಕೆಲಸವಿಲ್ಲದೆ ಮಹಾನಗರಗಳತ್ತ ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಂದ್ರದ ಹಳೆಯ ಪರಿಹಾರ ಲೆಕ್ಕಾಚಾರದ ಮಿತಿಗಳಿಂದಾಗಿ ನೈಜ ಸಂತ್ರಸ್ತರಿಗೆ ಸಿಗುವ ಮೊತ್ತ ತೀರಾ ಅಲ್ಪವಾಗಿದ್ದು, ಕೇವಲ ಹಣಕಾಸಿನ ನೆರವಿನಿಂದಷ್ಟೇ ಬರದ ಭವಣೆ ನೀಗಿಸಲು ಸಾಧ್ಯವಿಲ್ಲ ಎಂಬುದು ವಾಸ್ತವ.

ಈ ಹಿನ್ನೆಲೆಯಲ್ಲಿ, ಇತ್ತೀಚೆಗೆ ನಡೆದ ರಾಜ್ಯ ವಿಧಾನಮಂಡಲದ ವಿಶೇಷ ಅಧಿವೇಶನದಲ್ಲಿ ಕೇಂದ್ರದ ನೆರವು ಮತ್ತು ರಾಜ್ಯದ ವೆಚ್ಚದ ಕುರಿತು ಆಡಳಿತವಿರೋಧ ಪಕ್ಷಗಳ ನಡುವೆ ಭಾರಿ ವಾಕ್ಸಮರವೇ ನಡೆದಿದೆ. ಕೇಂದ್ರದಿಂದ ರಾಜ್ಯಕ್ಕೆ ಸತತವಾಗಿ ಅನ್ಯಾಯವಾಗುತ್ತಿದೆ ಎಂದು ಗುಡುಗಿರುವ ಸಚಿವ ಪ್ರಿಯಾಂಕ್ ಖರ್ಗೆ, ''ಮೋದಿ ಸರ್ಕಾರ ನಮಗೆ ಕೇವಲ ಖಾಲಿ ಡಬ್ಬಿ ಕೊಟ್ಟಿದೆ'' ಎಂದು ಕಟುವಾಗಿ ಟೀಕಿಸಿದ್ದಾರೆ. ಬರಪರಿಹಾರದ ವಿಚಾರದಲ್ಲಿ ಕಾಂಗ್ರೆಸ್‌ನ ಈ ಆಕ್ರೋಶಕ್ಕೆ ಪ್ರತಿಯಾಗಿ ಬಿಜೆಪಿ ಮತ್ತು ಜೆಡಿಎಸ್ ನಾಯಕರು ರಾಜ್ಯ ಸರ್ಕಾರದ ಹಣಕಾಸು ನಿರ್ವಹಣೆಯ ವೈಫಲ್ಯಗಳನ್ನು ಎತ್ತಿಹಿಡಿದು ಪ್ರತಿವಾದ ಮಂಡಿಸುತ್ತಿದ್ದು, ರೈತರ ಜೀವನ್ಮರಣದ ಪ್ರಶ್ನೆಯು ಕೇವಲ ರಾಜಕೀಯ ಕೆಸರೆರಚಾಟಕ್ಕೆ ವೇದಿಕೆಯಾಗಿದೆ.

ಆದರೆ, ಈ ಇಡೀ ಬಿಕ್ಕಟ್ಟಿನಲ್ಲಿ ಅತಿ ಹೆಚ್ಚು ಟೀಕೆಗೆ ಗುರಿಯಾಗುತ್ತಿರುವುದು ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ ಸಂಸದರ ತೀವ್ರ ಅಸಮರ್ಥತೆ ಮತ್ತು ನಿಷ್ಕ್ರಿಯತೆ. ಸದಾ ಕಾಲ ಮೋದಿ ಜಪ ಮಾಡುತ್ತಾ, ಕೇವಲ ರಾಜಕೀಯ ಕಾರ್ಯಕ್ರಮಗಳಿಗಾಗಿ ಮತ್ತು ಪಕ್ಷದ ಅಜೆಂಡಾಗಳಿಗಾಗಿ ರಾಜ್ಯಾದ್ಯಂತ ಸುತ್ತುವ ಈ ಸಂಸದರಿಗೆ, ನಾಡಿನ ಜನತೆ ಬರಗಾಲದ ತೀವ್ರ ಸಂಕಷ್ಟದಲ್ಲಿ ಬೆಂದು ಹೋಗುತ್ತಿರುವಾಗ ಅದೇ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರವನ್ನು ನೇರವಾಗಿ ಪ್ರಶ್ನಿಸುವ ಎದೆಗಾರಿಕೆ ಏಕೆ ಬರುತ್ತಿಲ್ಲ? ಎಂಬುದು ಪ್ರಜ್ಞಾವಂತ ಕನ್ನಡಿಗರ ಆಕ್ರೋಶದ ಪ್ರಶ್ನೆಯಾಗಿದೆ. ಅನ್ನದಾತರು ಬೀದಿಗೆ ಬಿದ್ದಿರುವಾಗ ಮೌನಕ್ಕೆ ಶರಣಾಗುವ ಇವರು, ರಾಜ್ಯದ ಹಿತಕ್ಕಿಂತ ಪಕ್ಷದ ವರಿಷ್ಠರ ಓಲೈಕೆಯೇ ಮುಖ್ಯ ಎಂಬಂತೆ ವರ್ತಿಸುತ್ತಿರುವುದು ಅವರ ಬದ್ಧತೆಯನ್ನೇ ಪ್ರಶ್ನಿಸುವಂತಿದೆ.

ರಾಜ್ಯದಿಂದ ಭಾರಿ ಬಹುಮತದೊಂದಿಗೆ ಆಯ್ಕೆಯಾಗಿ ಹೋಗುವ ಈ ನಾಯಕರು, ಕೇಂದ್ರದ ಎದುರು ನಾಡಿನ ದನಿಯಾಗುವ ಬದಲು ಬರಿಗೈ ದಾಸರಂತೆ ನಿಲ್ಲುತ್ತಿರುವುದು ನಾಡಿಗೆ ಬಗೆಯುತ್ತಿರುವ ದ್ರೋಹವೇ ಸರಿ. ಈ ಹಿಂದೆಯೂ ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಸೇರಿದಂತೆ ಹಲವರು, ಕೇಂದ್ರದಿಂದ ಪರಿಹಾರ ತರುವಲ್ಲಿ ಬಿಜೆಪಿ ಸಂಸದರ ''ಮೌನ''ವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದರು. ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕೊಂಡೊಯ್ಯುವಂತೆ ಗೃಹ ಸಚಿವ ಜಿ. ಪರಮೇಶ್ವರ್ ನೀಡಿದ್ದ ಕರೆಯೂ ಈ ಸಂಸದರನ್ನು ಬಡಿದೆಬ್ಬಿಸುವ ಯತ್ನದ ಭಾಗವೇ ಆಗಿತ್ತು. ಸಂಕಷ್ಟದ ಕಾಲದಲ್ಲಿ ರಾಜ್ಯದ ಪರವಾಗಿ ಗಟ್ಟಿಯಾಗಿ ನಿಲ್ಲಲಾಗದ ಈ ಸಂಸದರ ಅಸಮರ್ಥತೆ ಈಗ ಜಗಜ್ಜಾಹೀರಾಗಿದೆ.

2023ರ ಡಿಸೆಂಬರ್ 21ರಂದು ರಾಜ್ಯಸಭೆಯಲ್ಲಿ ಈರಣ್ಣ ಕಡಾಡಿ ಅವರು ಕಾಟಾಚಾರಕ್ಕೆಂಬಂತೆ ಬರದ ಕುರಿತು ದನಿ ಎತ್ತಿದ್ದರು (ಇದಕ್ಕೇ ಕೇಂದ್ರ ಗೃಹ ಸಚಿವಾಲಯ 2025ರ ಡಿಸೆಂಬರ್ 3ರಂದು ₹3,454 ಕೋಟಿ ಬಿಡುಗಡೆಯ ಉತ್ತರ ನೀಡಿತ್ತು) ಹಾಗೂ 2026ರ ಜುಲೈ 27ರ ಸರ್ವಪಕ್ಷ ಸಭೆಯಲ್ಲಿ ಈ ಸಂಸದರು ಮುಖತೋರಿಸಿದ್ದರು. ಆದರೆ, ಇಂತಹ ನೆಪಮಾತ್ರದ ಯತ್ನಗಳು ಅವರ ಅಸಮರ್ಥತೆಯನ್ನು ಮತ್ತಷ್ಟು ಬೆತ್ತಲೆಗೊಳಿಸಿವೆಯೇ ಹೊರತು ರಾಜ್ಯಕ್ಕೆ ಒಡೆದ ಕಾಸಿನ ಲಾಭವನ್ನೂ ತಂದಿಲ್ಲ. ಕೇವಲ ಹಾಜರಾತಿಗಾಗಿ ಮಾಡಿದ ಈ ನಾಮಕಾವಸ್ಥೆಯ ಯತ್ನಗಳು ಕನ್ನಡಿಗರ ಪಾಲಿಗೆ ಅಣಕದಂತಿವೆ. ₹18 ಸಾವಿರ ಕೋಟಿ ಬೇಡಿಕೆ ಇಟ್ಟಾಗ ಕೇವಲ ಶೇ. 19ರಷ್ಟು ಅಲ್ಪ ನೆರವು ಮಾತ್ರ ತರಲು ಶಕ್ತರಾದ ಈ ಸಂಸದರ ರಾಜಕೀಯ ತೂಕ ಕೇಂದ್ರದ ಮುಂದೆ ಎಷ್ಟೊಂದು ಕಳಪೆಯಾಗಿದೆ ಎಂಬುದನ್ನೇ ಈ ಘಟನೆಗಳು ನಿರ್ದಾಕ್ಷಿಣ್ಯವಾಗಿ ಸಾಬೀತುಪಡಿಸುತ್ತವೆ.

ಪ್ರಸಕ್ತ 2026ರ ಸಾಲಿನಲ್ಲಿ ಸಲ್ಲಿಸಲಾಗಿರುವ ₹3,705.30 ಕೋಟಿ ಬೇಡಿಕೆಗೆ ಕೇಂದ್ರ ಸರ್ಕಾರ ಎಷ್ಟು ಮೊತ್ತವನ್ನು, ಎಷ್ಟು ಶೀಘ್ರವಾಗಿ ಒದಗಿಸಲಿದೆ ಎಂಬುದರ ಮೇಲೆ ಈ ನಾಮಕಾವಸ್ಥೆ ಸಂಸದರ ಅಳಿದುಳಿದ ಬದ್ಧತೆ ಸಾಬೀತಾಗಬೇಕಿದೆ. ಕೃಷಿ ನಾಶ, ಮೇವಿನ ಕೊರತೆ ಮತ್ತು ಕುಡಿಯುವ ನೀರಿನ ಬಿಕ್ಕಟ್ಟಿನಲ್ಲಿ ಸಿಲುಕಿರುವ ರೈತರ ಹಿತದೃಷ್ಟಿಯಿಂದ, ರಾಜ್ಯದ ಬೇಡಿಕೆ ಹಾಗೂ ಕೇಂದ್ರದ ಬಿಡುಗಡೆಯ ನಡುವಿನ ಅಂತರವನ್ನು ಮುಚ್ಚಲು ಮೋದಿ ಜಪದ ಸಂಸದರು ಇನ್ನಾದರೂ ಪ್ರಾಮಾಣಿಕ ಇಚ್ಛಾಶಕ್ತಿ ಪ್ರದರ್ಶಿಸಬೇಕಿದೆ. ಇಲ್ಲವಾದಲ್ಲಿ, ಇದು ಕೇವಲ ಅಂಕಿಅಂಶಗಳ ರಾಜಕೀಯ ಸಂಘರ್ಷವಾಗಿ ಉಳಿಯದೆ, ಗ್ರಾಮೀಣ ಕರ್ನಾಟಕದ ಬದುಕಿಗೆ ಮರ್ಮಾಘಾತ ನೀಡುವ ಕರಾಳ ಶಾಸನವಾಗಿ ಪರಿಣಮಿಸಲಿದೆ.

'ಹಾಸ್ಟೆಲ್' ಇಲ್ಲದ ಶಿಕ್ಷಣದ ಸ್ವರೂಪ ಹೇಗಿರಲಿದೆ?

ಸಾಮಾನ್ಯವಾಗಿ ಶಿಕ್ಷಣ ಎಂದರೆ ತರಗತಿ, ಪಠ್ಯಪುಸ್ತಕ ಮತ್ತು ಪರೀಕ್ಷೆಗಳ ಸುತ್ತ ಹೆಣೆದುಕೊಂಡಿರುವ ಕಲ್ಪನೆ. ಆದರೆ ಒಬ್ಬ ವಿದ್ಯಾರ್ಥಿ ದಿನದ ಬಹುಪಾಲು ಕಳೆಯುವ ಜಾಗ ಹಾಸ್ಟೆಲ್. ಹೆಚ್ಚಾಗಿ ಚರ್ಚೆಗೆ ಬಾರದ ಈ ಹಾಸ್ಟೆಲ್ ಎಂಬ ಪರಿಕಲ್ಪನೆಯೇ ಶಿಕ್ಷಣದ ಚೌಕಟ್ಟಿನಿಂದ ಕಣ್ಮರೆಯಾದರೆ, ಅಂತಹ ಶಿಕ್ಷಣದ ಸ್ವರೂಪ ಹೇಗಿರಲಿದೆ? ದೆಹಲಿಯ ಸತ್ಯ ನಿಕೇತನ ದುರಂತದ ಹಿನ್ನೆಲೆ ಮರೆತಿರುವ ಈ ಭಾಗವನ್ನು ಮತ್ತೆ ನೆನಪಿಸಿಕೊಳ್ಳಬೇಕಿದೆ.

ದೆಹಲಿ ದಕ್ಷಿಣ ಭಾಗದ ಸತ್ಯ ನಿಕೇತನದಲ್ಲಿ ಕಳೆದ ಸೆಪ್ಟೆಂಬರ್ 6ರಂದು ಮಧ್ಯಾಹ್ನ 5 ಅಂತಸ್ತಿನ ಕಟ್ಟಡವೊಂದು ಏಕಾಏಕಿ ಕುಸಿದುಬಿತ್ತು. ಈ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗಾಗಿ ಖಾಸಗಿ ಹಾಸ್ಟೆಲ್ ನಡೆಸಲಾಗುತ್ತಿತ್ತು. ದೆಹಲಿ ವಿಶ್ವವಿದ್ಯಾಲಯದ ದಕ್ಷಿಣ ಕ್ಯಾಂಪಸ್‌ನ ಕಾಲೇಜುಗಳಿಗೆ ಸಮೀಪದಲ್ಲಿದ್ದ ಕಾರಣ ಈ ಪ್ರದೇಶದಲ್ಲಿ ವಿದ್ಯಾರ್ಥಿಗಳ ವಸತಿ ಹೆಚ್ಚು. ಕುಸಿದ ಕಟ್ಟಡದಲ್ಲೂ ಹಲವು ವಿದ್ಯಾರ್ಥಿಗಳು ವಾಸಿಸುತ್ತಿದ್ದರು. ಕಟ್ಟಡ ಕುಸಿದಾಗ ಹಲವರು ಅವಶೇಷಗಳಡಿ ಸಿಲುಕಿಕೊಂಡರು. ಪೊಲೀಸರು, ಅಗ್ನಿಶಾಮಕ ದಳ ಹಾಗೂ ರಕ್ಷಣಾ ತಂಡಗಳು ಸತತವಾಗಿ ಕಾರ್ಯಾಚರಣೆ ನಡೆಸಿ 12 ಮಂದಿಯನ್ನು ಅವಶೇಷಗಳಿಂದ ಹೊರತೆಗೆದವು. ಅವರಲ್ಲಿ 7 ಮಂದಿ ಮೃತಪಟ್ಟರೆ, ಐವರು ಗಾಯಗೊಂಡರು. ಮೃತಪಟ್ಟವರ ಪೈಕಿ 5 ಮಂದಿ ವಿದ್ಯಾರ್ಥಿಗಳಿದ್ದರು.

ಸುಮಾರು ಐದು ದಶಕಗಳಷ್ಟು ಹಳೆಯದಾಗಿದ್ದ ಈ ಕಟ್ಟಡದಲ್ಲಿ ಇತ್ತೀಚೆಗೆ ದುರಸ್ತಿ ಮತ್ತು ನಿರ್ಮಾಣ ಕಾಮಗಾರಿ ನಡೆದಿತ್ತು. ಕುಸಿತ ಸಂಭವಿಸಿದ ವೇಳೆಯಲ್ಲೂ ನೆಲಮಾಳಿಗೆಯಲ್ಲಿ ಕಾಮಗಾರಿ ನಡೆಯುತ್ತಿತ್ತು. ನೆಲಮಾಳಿಗೆಯಲ್ಲಿ ನೀರು ಕೂಡ ಸಂಗ್ರಹವಾಗಿತ್ತು. ಪ್ರಾಥಮಿಕ ತನಿಖೆಯಲ್ಲಿ ಈ ಕಾಮಗಾರಿ ಹಾಗೂ ಕಟ್ಟಡದ ಹಳೆಯ ರಚನೆಯ ಮೇಲೆ ಬಿದ್ದ ಹೆಚ್ಚುವರಿ ಹೊರೆ ಕುಸಿತಕ್ಕೆ ಕಾರಣವಾಗಿರಬಹುದೆಂಬ ಅನುಮಾನ ವ್ಯಕ್ತವಾಗಿದೆ. ಸದ್ಯ ತನಿಖೆ ಮುಂದುವರೆದಿದೆ.

ತರಗತಿ, ಪಠ್ಯಕ್ರಮ, ಪರೀಕ್ಷೆ, ಫಲಿತಾಂಶ, ಕಾಲೇಜಿನ ಮೂಲಸೌಕರ್ಯ.. ಇವೆಲ್ಲವನ್ನೂ ಶಿಕ್ಷಣದ ಅವಿಭಾಜ್ಯ ಭಾಗವೆಂದು ನೋಡಲಾಗುತ್ತದೆ. ಆದರೆ ವಿದ್ಯಾರ್ಥಿಗಳು ತಂಗುವ ಹಾಸ್ಟೆಲ್ ಅನ್ನು ಮಾತ್ರ ಬಹುತೇಕ ಕಾಲೇಜಿನ ಹೊರಗಿನ ಖಾಸಗಿ ವಿಷಯದಂತೆ ನೋಡಲಾಗುತ್ತದೆ. ದೆಹಲಿ ದುರಂತ ಈ ತಪ್ಪು ಕಲ್ಪನೆಯ ಅಪಾಯವನ್ನು ಬಯಲಿಗೆಳೆದಿದೆ.

ಇದೇ ಹಿನ್ನೆಲೆಯಲ್ಲಿ ಶಿಕ್ಷಣ ತಜ್ಞ, ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹಾಗೂ 2004ರಿಂದ 2010ರವರೆಗೆ ನಿರ್ದೇಶಕರಾಗಿದ್ದ ಕೃಷ್ಣ ಕುಮಾರ್ ಅವರು ದಿ ಇಂಡಿಯನ್ ಎಕ್ಸ್ ಪ್ರೆಸ್‌ಗೆ ಬರೆದಿರುವ ಲೇಖನವೊಂದು ಗಮನ ಸೆಳೆಯುತ್ತದೆ. ಸತ್ಯ ನಿಕೇತನದ ದುರಂತವನ್ನು ಆಧಾರವಾಗಿಟ್ಟುಕೊಂಡು, ಹಾಸ್ಟೆಲ್ ಎಂಬುದು ವಿದ್ಯಾರ್ಥಿಯ ರಾತ್ರಿ ತಂಗುವ ಸ್ಥಳ ಮಾತ್ರವಲ್ಲ, ಅದು ಆತನ ಶಿಕ್ಷಣದ ಅನುಭವದ ಪ್ರಮುಖ ಭಾಗ ಎಂಬ ವಿಚಾರವನ್ನು ಅವರು ಮುಂದಿಟ್ಟಿದ್ದಾರೆ.

ನಗರಗಳಲ್ಲಿ ಸಂಭವಿಸುವ ವಿಪತ್ತುಗಳ ಅಧ್ಯಯನದ ವೇಳೆ ಹಾಸ್ಟೆಲ್‌ಗಳಂತಹ ಸ್ಥಳಗಳಿಗೆ ಸಾಮಾನ್ಯವಾಗಿ ಹೆಚ್ಚಿನ ಮನ್ನಣೆ ಸಿಗುವುದಿಲ್ಲ. ದಕ್ಷಿಣ ದೆಹಲಿಯ ಸತ್ಯ ನಿಕೇತನದ ಸಮೀಪ ದೆಹಲಿ ವಿಶ್ವವಿದ್ಯಾಲಯದ ದಕ್ಷಿಣ ಕ್ಯಾಂಪಸ್‌ನ ಹಲವು ಪ್ರತಿಷ್ಠಿತ ಕಾಲೇಜುಗಳಿವೆ. ಹತ್ತಿರದಲ್ಲೇ ದುಬಾರಿ ಹೋಟೆಲ್‌ಗಳು, ರಾಯಭಾರ ಕಚೇರಿಗಳು ಮತ್ತು ಶ್ರೀಮಂತ ಪ್ರದೇಶಗಳಿದ್ದರೂ, ವಿದ್ಯಾರ್ಥಿಗಳು ವಾಸಿಸುತ್ತಿದ್ದ ದುರ್ಬಲ ಕಟ್ಟಡವೊಂದು ಕುಸಿದಿರುವುದು ವಿಷಾದ. ಹಾಸ್ಟೆಲ್ ಜೀವನವು ಶೈಕ್ಷಣಿಕ ಅನುಭವದ ಒಂದು ಭಾಗ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾದರೂ, ಅದನ್ನು ಶಿಕ್ಷಣದ ಚರ್ಚೆಯಲ್ಲಿ ಸ್ಪಷ್ಟವಾಗಿ ಹೇಳುವುದು ಅಪರೂಪ ಎಂದು ಕೃಷ್ಣ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ದೆಹಲಿ ವಿಶ್ವವಿದ್ಯಾಲಯದ ಗ್ವೈರ್ ಹಾಲ್‌ನಂತಹ ಹಳೆಯ ಹಾಸ್ಟೆಲ್‌ಗಳ ಉದಾಹರಣೆ ನೀಡಿರುವ ಅವರು, ವಿಶಾಲವಾದ ಆವರಣ, ಓದಲು ಅನುಕೂಲಕರ ವಾತಾವರಣ ಮತ್ತು ವಿದ್ಯಾರ್ಥಿಗಳ ನಡುವೆ ರೂಪುಗೊಳ್ಳುವ ಸಮುದಾಯದ ಅನುಭವವನ್ನು ವಿವರಿಸಿದ್ದಾರೆ. ಆದರೆ ಇಂತಹ ಹಾಸ್ಟೆಲ್‌ಗಳಲ್ಲಿ ಕೆಲವೇ ವಿದ್ಯಾರ್ಥಿಗಳಿಗೆ ಮಾತ್ರ ಜಾಗ ಸಿಗುತ್ತದೆ. ಬಹುಪಾಲು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಬಾಡಿಗೆ ಕೊಠಡಿಗಳು ಮತ್ತು ಖಾಸಗಿ ವಸತಿಗಳಲ್ಲಿ ಉಳಿಯಬೇಕಾಗುತ್ತದೆ. ಸತ್ಯ ನಿಕೇತನದ ಕಿರಿದಾದ ರಸ್ತೆಗಳು, ಜೋತುಬಿದ್ದ ವಿದ್ಯುತ್ ತಂತಿಗಳು ಮತ್ತು ಅಸ್ತವ್ಯಸ್ತ ವಸತಿ ಪರಿಸ್ಥಿತಿಯ ನಡುವೆ ವಿದ್ಯಾರ್ಥಿಗಳು ತಮ್ಮ ಓದನ್ನು ಮುಂದುವರಿಸಲೇ ಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಚಿತ್ರಿಸಿದ್ದಾರೆ.

ದೇಶದ ವಿವಿಧ ಭಾಗಗಳ ವಿದ್ಯಾರ್ಥಿಗಳು ಬೇರೆ ಬೇರೆ ನಗರಗಳಿಗೆ ತೆರಳಿ ಓದಲು ಅನುಕೂಲವಾಗುವಂತೆ ಪ್ರವೇಶ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ. ಇದರಿಂದ ಉಂಟಾಗುವ ಭೌಗೋಳಿಕ ಚಲನೆಗೆ ಅನುಗುಣವಾಗಿ ಹಾಸ್ಟೆಲ್‌ಗಳನ್ನೂ ನಿರ್ಮಿಸುವ ಯೋಜನೆಯ ಬಗ್ಗೆ ಯಾಕೆ ಎಲ್ಲೂ ಚರ್ಚೆಯಾಗಲಿಲ್ಲ. ಇದಕ್ಕೆ ಹಣದ ಕೊರತೆಯಾಗಿರಬಹುದು ಅಥವಾ ಅದಕ್ಕಿಂತ ಹೆಚ್ಚಾಗಿ ಯೋಜನೆಯ ಕಲ್ಪನೆಯಲ್ಲೇ ಕೊರತೆಯಾಗಿರುವುದು ಕಾರಣವಿರಬಹುದು. ಖಾಸಗಿ ಕೊಠಡಿಗಳ ಮಾಲೀಕರಿಗೆ ವಿದ್ಯಾರ್ಥಿಯಿಂದ ಸಮಯಕ್ಕೆ ಬಾಡಿಗೆ ಸಿಗುವುದು ಮುಖ್ಯ; ವಿದ್ಯಾರ್ಥಿಗೆ ಓದಲು ಪುಸ್ತಕದ ಕಪಾಟು, ಟೇಬಲ್ ಅಥವಾ ಟೇಬಲ್ ಲ್ಯಾಂಪ್ ಬೇಕೇ ಎಂಬುದು ಅವರ ಹೊಣೆಗಾರಿಕೆಯಲ್ಲ. ಇದೇ ವೇಳೆ ಕಾಲೇಜುಗಳೂ ವಿದ್ಯಾರ್ಥಿಗಳ ತರಗತಿಯ ಹೊರಗಿನ ದೈನಂದಿನ ಜೀವನದ ಬಗ್ಗೆ ಹೆಚ್ಚಿನ ಗಮನ ಹರಿಸುವುದಿಲ್ಲ. ಸತ್ಯ ನಿಕೇತನದ ಸುತ್ತಮುತ್ತಲಿನ ಏಳು ಕಾಲೇಜುಗಳಲ್ಲಿ ಮೂರಕ್ಕಷ್ಟೇ ಹಾಸ್ಟೆಲ್‌ಗಳಿದ್ದು, ಅವುಗಳಲ್ಲಿಯೂ ಒಟ್ಟು ವಿದ್ಯಾರ್ಥಿಗಳ ಒಂದು ಸಣ್ಣ ಭಾಗಕ್ಕಷ್ಟೇ ವಸತಿ ಸಿಗುತ್ತದೆ ಎಂದು ಕೃಷ್ಣ ಕುಮಾರ್ ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಹಾಸ್ಟೆಲ್‌ಗಳ ಕೊರತೆಯಿಂದ ಹೆಚ್ಚೆಂದರೆ ಇನ್ನೇನಾಗಿಬಿಡಬಹುದು! ರೆಂಟೆಡ್ ರೂಂ, ಪೇಯಿಂಗ್ ಗೆಸ್ಟ್‌ಗಳು, ಹತ್ತಿರದವರ ಮನೆ, ಸ್ನೇಹಿತರ ಕೊಠಡಿ ಹೀಗೆ ಸಾಕಷ್ಟು ಪರ್ಯಾಯಗಳಿವೆಯಲ್ಲ ಎಂದುಕೊಳ್ಳಬಹುದು. ಆ ಕೊರತೆಯ ಪರಿಣಾಮವನ್ನು ಖಾಲಿ ಹಾಸಿಗೆಗಳ ಸಂಖ್ಯೆಯಿಂದ ಅಳೆಯಲು ಸಾಧ್ಯವಿಲ್ಲ. ಹಾಸ್ಟೆಲ್‌ನ ಒಂದೇ ಕಾರಣಕ್ಕೆ ನಗರಕ್ಕೆ ಓದಲು ಬರುವ ವಿದ್ಯಾರ್ಥಿಯ ಜೀವನದ ಸಂಪೂರ್ಣ ಲೆಕ್ಕಾಚಾರವೇ ಬದಲಾಗುತ್ತದೆ. ಕಾಲೇಜಿಗೆ ಹತ್ತಿರದ ಜಾಗ ದುಬಾರಿಯಾಗಿದ್ದರೆ ದೂರದ ಪ್ರದೇಶಕ್ಕೆ ಹೋಗಬೇಕು. ದೂರವಿದ್ದರೆ ಪ್ರಯಾಣದ ಸಮಯ ಮತ್ತು ವೆಚ್ಚ ಹೆಚ್ಚುತ್ತದೆ. ಕಡಿಮೆ ಬಾಡಿಗೆಯ ಜಾಗ ಹುಡುಕಿದರೆ ಸೌಲಭ್ಯ ಮತ್ತು ಸುರಕ್ಷತೆಯಲ್ಲಿ ರಾಜಿ ಮಾಡಿಕೊಳ್ಳಬೇಕಾಗಬಹುದು. ಹೀಗಾಗಿ ತರಗತಿಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಒಂದೇ ಶಿಕ್ಷಣ ಸಿಕ್ಕರೂ, ಕಾಲೇಜಿನ ಹೊರಗಿನ ಅವರ ಬದುಕಿನ ಪರಿಸ್ಥಿತಿ ಒಂದೇ ಆಗಿರುವುದಿಲ್ಲ.

ಇದರ ಪರಿಣಾಮ ಓದಿನ ಮೇಲೂ ಬೀಳುತ್ತದೆ. ಬೆಳಗ್ಗೆ ಕಾಲೇಜಿಗೆ ಹೋಗಲು ದೀರ್ಘ ಪ್ರಯಾಣ ಮಾಡಬೇಕಾದ ವಿದ್ಯಾರ್ಥಿ, ಸಂಜೆ ಮರಳಿ ಬಂದ ಬಳಿಕ ಓದಲು ಎಷ್ಟು ಸಮಯ ಮತ್ತು ಶಕ್ತಿ ಉಳಿಸಿಕೊಳ್ಳಬಲ್ಲ? ಹಾಸ್ಟೆಲ್ ಅಥವಾ ಯಲ್ಲಿ ಜನದಟ್ಟಣೆ, ಶಬ್ದ, ಗೌಪ್ಯತೆಯ ಕೊರತೆ ಇದ್ದರೆ ಓದಿಗೆ ಬೇಕಾದ ಏಕಾಗ್ರತೆಯೂ ಕಷ್ಟವೇ. ಹೀಗಾಗಿ ವಸತಿ ಎನ್ನುವುದು ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟದ ಮೇಲೂ ಪರಿಣಾಮ ಬೀರುವ ಅಂಶ. ದೊಡ್ಡ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ದೇಶದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳನ್ನು ಸೆಳೆಯುತ್ತವೆ. ಆದರೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ ವೇಗಕ್ಕೆ ಅನುಗುಣವಾಗಿ ವಸತಿ ವ್ಯವಸ್ಥೆ ವಿಸ್ತರಿಸದಿದ್ದರೆ, ಆ ಕೊರತೆಯನ್ನು ಖಾಸಗಿ ಮಾರುಕಟ್ಟೆ ತುಂಬುತ್ತದೆ. ಬೇಡಿಕೆ ಇರುವ ಕಡೆ ಗಳು, ಹಾಸ್ಟೆಲ್‌ಗಳು ಮತ್ತು ಬಾಡಿಗೆ ಕೊಠಡಿಗಳು ಹೆಚ್ಚೆಚ್ಚು ತಲೆ ಎತ್ತುತ್ತವೆ.

ಪ್ರಸ್ತುತ ಪಟ್ಟಿಯ ಪ್ರಕಾರ ದೇಶದಲ್ಲಿ ಒಟ್ಟು 1,289 ವಿಶ್ವವಿದ್ಯಾಲಯಗಳಿವೆ. ಇದರಲ್ಲಿ 57 ಕೇಂದ್ರ ವಿಶ್ವವಿದ್ಯಾಲಯಗಳು, 521 ರಾಜ್ಯ ವಿಶ್ವವಿದ್ಯಾಲಯಗಳು, 155 ಡೀಮ್ಡ್ ವಿಶ್ವವಿದ್ಯಾಲಯಗಳು ಹಾಗೂ 556 ಖಾಸಗಿ ವಿಶ್ವವಿದ್ಯಾಲಯಗಳು ಸೇರಿವೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR